
ಜೂನ್-2013

ಕಲ್ಯಾಣ ಕಿರಣ

ಬೆಲೆ-20/-





ಡಾ॥ ವಿಜಯಲಕ್ಷ್ಮಿ ಬಾಳೇಕುಂದ್ರಿಯವರಿಂದ ಬಸವ ಜಯಂತಿ ಉದ್ಘಾಟನೆ



ವಿಶ್ವಗುರು ಬಸವಣ್ಣ ಪುಸ್ತಕ ಬಿಡುಗಡೆ



ಬಸವ ಜಯಂತಿಯಂದು ಗುರು ಬಸವಣ್ಣನವರನ್ನು ತೊಟ್ಟಿಲಿಗೆ ಹಾಕಿ ಜೋಗುಳ ಹಾಡಲಾಯಿತು

ಮಾತಾಜಿ ಬಯಸಿದ ಬಸವ ಧರ್ಮ

ಮಾತಾಜಿ ಬಯಸಿದ ಲಿಂಗಾಯತ ಧರ್ಮವು
ನಿಜದಿ ನಿರ್ಮಿತವಾಗಲಿ ।
ವಚನ ಸಾಹಿತ್ಯದ ಪ್ರಭೆಯು ಹರಡಲಿ
ಕಲ್ಯಾಣ ರಾಜ್ಯವು ಉದಿಸಲಿ ॥

ಜಾತಿ ಮತ್ಸರ ಸ್ವಾರ್ಥ ವಂಚನೆ
ಹೇಯ ಗುಣಗಳು ತೊಲಗಲಿ ।
ಅಸಮತೆಯ ಆ ಕಸವು ಕಮರಲಿ
ಸಮತೆ ಸದ್ಭಾವವು ಬೆಳಗಲಿ ॥

ಹುಟ್ಟಿನಿಂದಲೇ ಶ್ರೇಷ್ಠತೆಯ ಅಳೆಯುವ
ಕಪಟ ನಿಲುವದು ತೊರೆಯಲಿ ।
ಜಾತಿ ಜಂಗಮದ ಜಂಜಡವು ಅಡಗಲಿ
ನೀತಿಯ ತಳಹದಿ ತಿಳಿಯಲಿ ॥

ಅಂಧ ಆಚರಣೆ ಮೂಢನಂಬಿಕೆಗಳ
ಮುಸುಕಿದ ಮೋಡವು ಚದುರಲಿ ।
ಶರಣ ಧರ್ಮದ ಶಂಖ ಮೊಳಗಲಿ
ಪುರೋಹಿತಿಗಳ ಪುಂಗಿಯು ನಡುಗಲಿ ॥

ಒಳಜಾತಿ ಪಂಗಡಗಳ ತುಮುಲ ಕರಗಲಿ
ಏಕತೆಯ ಗೀತೆಯು ಉಲಿಯಲಿ ।
ಪರಿಪೂರ್ಣವಾದ ಲಿಂಗಾಯತ ಧರ್ಮಕೆ
ಸ್ವಾತಂತ್ರ್ಯದ ಮಾನ್ಯತೆ ದೊರೆಯಲಿ ॥

ಸತ್ಯಕಾಯಕದ ನಿಷ್ಠೆಯು ಬೆಳೆಯಲಿ
ದಾಸೋಹ ಭಾವವು ಬಲಿಯಲಿ ।
ಲಿಂಗ, ಜಂಗಮದ ಸಂಗ ಸೌಖ್ಯದಲಿ
ಬದುಕು ಮಂಗಳವಾಗಲಿ ॥

ಶರಣ. ಮಹಾದೇವ ಗುಡೇರ್
ಸಂಚಾಲಕರು, ರಾಷ್ಟ್ರೀಯ ಬಸವ ದಳ, ಗೋಕಾಕ
ಜಂಗಮವಾಣಿ: 9448391949

ಈ ವರ್ಷ 818ನೆಯ ಬಸವ ಪಂಚಮಿಯು ದೇವ(ಭಾನು)ವಾರ
ದಿನಾಂಕ 11-8-2013ರಂದು ಒದಗಿ ಬಂದಿದೆ.

|| ಓಂ ಶ್ರೀ ಗುರು ಬಸವಲಿಂಗಾಯ ನಮಃ ||
866666

ಸಂಪುಟ-44	ಬಸವ ಶಕೆ -880	ಪಂಚ ವಾರ್ಷಿಕ ಸದಸ್ಯತ್ವ 1000 ರೂ.
ಸಂಚಿಕೆ-6	ಜೂನ್-2013	ವಾರ್ಷಿಕ ಚಂದಾ 200 ರೂ.

ಕಿರಣ ಗನ್ನಡಿ

ಜೂನ್-ಜುಲೈ-ಆಗಸ್ಟ್ ತಿಂಗಳಲ್ಲಿ ಬರುವ ಹಬ್ಬ ಹುಣ್ಣಿಮೆಗಳು

ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳ ಲಿಂಗೈಕ್ಯ ಸಂಸ್ಮರಣೆ – ಜೂನ್ 30
ಬಸವ ಜ್ಯೋತಿ ಕಾರ್ಯಕ್ರಮ ಆರಂಭ – ಆಗಸ್ಟ್ 07
818ನೆಯ ಬಸವ ಪಂಚಮಿ – ಆಗಸ್ಟ್ 11
ನೀಲಾಂಬಿಕಾ ಷಷ್ಠಿ – ಆಗಸ್ಟ್ 12

ಮುಖಪುಟ : ಬಸವ ಗಂಗೋತ್ರಿಯಲ್ಲಿ ನಿರ್ಮಾಣವಾಗಲಿರುವ 111 ಅಡಿ ಬಸವ ಪುತ್ಥಳಿ

ಕಲ್ಯಾಣ ಕಿರಣ ಚಂದಾ

ಕಲ್ಯಾಣ ಕಿರಣದ ವಾರ್ಷಿಕ ಚಂದಾ 200ರೂ. ಪಂಚವಾರ್ಷಿಕ ಚಂದಾ 1000ರೂ. ಕಳಿಸಬೇಕು ಎನ್ನುವವರು ಎಂ.ಓ. ಮೂಲಕ, ಬ್ಯಾಂಕ್ ಡ್ರಾಫ್ಟ್ ಮೂಲಕ ಕಳಿಸಬಹುದು. ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ಹೆಸರಿಗೆ ಡಿ.ಡಿ. ತೆಗೆಸಬೇಕು.


ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್
ಬಸವ ಮಂಟಪ, 2035, 20ನೇ ಮೇನ್, ರಾಜಾಜಿನಗರ 2ನೇ ಬ್ಲಾಕ್
ಬೆಂಗಳೂರು-560010
ದೂರವಾಣಿ : 080-23131476 / 9945806297

Kalyana Kirana -Reg No.19988/70. Monthly Magazine Edited and Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-560010. Phone : 080-23131476, Send SMS to 9945806297/ 9738028585/ 8892912123
Email :- kalyanakirana1970@gmail.com

|| ಓಂ ಶ್ರೀ ಗುರು ಬಸವಲಿಂಗಾಯ ನಮಃ ||

866666

ವಿಶ್ವಗುರು ಬಸವಣ್ಣನವರ 818 ನೆಯ ಲಿಂಗೈಕ್ಯ ಸಂಸ್ಮರಣೆ



ಸೋಮ(ಶಿವ)ವಾರ, ದಿ. 12-08-2013 ರಂದು ಬೆಳಿಗ್ಗೆ 10-30

ಬೆಂಗಳೂರು ನಗರದ
ಸಿಟಿ ಮಾರುಕಟ್ಟೆ ಪ್ರದೇಶದಲ್ಲಿರುವ
ಸರ್ ಕೆ.ಪಿ.ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ
(ಟೌನ್ ಹಾಲ್)

❋ ಶರಣರ ಬರುವೆಮಗೆ ಪ್ರಾಣ ಜೀವಾಳ ❋

ವಿಶ್ವಗುರು ಬಸವಣ್ಣನವರ ಮತ್ತು ದಾಸೋಹ ಮೂರ್ತಿ ನೀಲಾಂಬಿಕಾ ತಾಯಿಯವರ 818ನೆಯ ಲಿಂಗೈಕ್ಯ ಸಂಸ್ಮರಣೆ

ಶರಣ ಬಂಧುಗಳಲ್ಲಿ ಹೃತ್ಪೂರ್ವಕ ಬಿನ್ನಹ,

ವಿಶ್ವಗುರು ಬಸವಣ್ಣನವರು ಆನಂದನಾಮ ಸಂವತ್ಸರದ ವೈಶಾಖ ಮಾಸದ ಅಕ್ಷಯ ತೃತೀಯಾದಂದು ರೋಹಿಣಿ ನಕ್ಷತ್ರದಲ್ಲಿ ಜನಿಸಿ (30-4-1134) 62 ವರ್ಷ 3 ತಿಂಗಳು 2 ದಿವಸಗಳ ಈ ಇಳೆಯ ಮೇಲಿದ್ದು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿ ಬಸವ(ಮಂಗಳ)ವಾರದಂದು ದಿ.30-7-1196ರಂದು, ಉರಿಯುಂಡ ಕರ್ಪುರದಂತೆ, ಸಮುದ್ರವನ್ನು ಬೆರೆದ ನದಿಯಂತೆ ಲಿಂಗೈಕ್ಯರಾಗಿ ಲಿಂಗದೇವನಲ್ಲಿ ಒಂದಾದರು. ಅವರು ಬಯಲಾದಂದಿನಿಂದಲೂ ಆ ದಿನವು "ಬಸವ ಪಂಚಮಿ" ಎಂದು ಖ್ಯಾತಿವೆತ್ತಿದೆ. ಈ ವರ್ಷ 818ನೆಯ ಲಿಂಗೈಕ್ಯ ದಿನವು ದೇವ(ಭಾನು)ವಾರ ದಿ.11-8-2013ರಂದು ಒದಗಿ ಬಂದಿದೆ.

ನಾವು ಪ್ರತಿವರ್ಷವು ಬಸವ ಪಂಚಮಿಯನ್ನು ಬೆಂಗಳೂರು ನಗರದ ಸಿಟಿ ಮಾರುಕಟ್ಟೆ ಪ್ರದೇಶದಲ್ಲಿರುವ ಸರ್.ಕೆ.ಪಿ.ಪುಟ್ಟಣ್ಣಶೆಟ್ಟಿ ಪುರಭವನದಲ್ಲಿ ಮಾಡುತ್ತೇವೆ. ಈ ವರ್ಷ ಭಾನುವಾರದಂದೇ ಶ್ರಾವಣಶುದ್ಧ ಪಂಚಮಿ ಬಂದಿರುವುದರಿಂದ ಟೌನ್ ಹಾಲ್ ಬಾಡಿಗೆಗೆ ಸಿಗುತ್ತಲಿಲ್ಲ. ಬೇರೆ ಯಾವುದೇ ಹಾಲ್ ಸಹ ಸಿಗುತ್ತಲಿಲ್ಲ. ಪೆಂಡಾಲ್ ಹಾಕಿ ಮಾಡಲು ಮಳೆಗಾಲವಾದ್ದರಿಂದ ಸಾಧ್ಯವಿಲ್ಲ. ಅದಕ್ಕಾಗಿ ದಿ.11-8-2013ರಂದು ಸಂಕ್ಷಿಪ್ತವಾಗಿ ಬಸವ ಮಂಟಪದಲ್ಲಿ ಬಸವ ಪಂಚಮಿ ಆಚರಿಸಿ ಸೋಮ(ಶಿವ)ವಾರದಂದು ದಿ.12-8-2013ರಂದು ವಿಶೇಷವಾಗಿ ಬಸವ ಲಿಂಗೈಕ್ಯ ಸಂಸ್ಮರಣೆಯನ್ನು ಸರ್. ಕೆ.ಪಿ.ಪುಟ್ಟಣ್ಣಶೆಟ್ಟಿ ಪುರಭವನದಲ್ಲಿ ಆಚರಿಸುತ್ತಲಿದ್ದೇವೆ.

ಆದಿ ಪ್ರಮಥ, ಗಣಾಧಿಪತಿ ಬಸವಣ್ಣನವರು ಲಿಂಗೈಕ್ಯರಾದ ಮರುದಿವಸ ದಾಸೋಹಮೂರ್ತಿ ನೀಲಾಂಬಿಕಾ ತಾಯಿಯವರು ಸಹ ಉರಿಯುಂಡ ಕರ್ಪುರದಂತೆ ಲಿಂಗೈಕ್ಯರಾದರು. ಅವರ ಲಿಂಗೈಕ್ಯ ಸಂಸ್ಮರಣೆಯನ್ನು ಬಸವ(ಮಂಗಳ)ವಾರ ದಿ.13-8-2013ರಂದು ಬೆಳಿಗ್ಗೆ 10-30ಗಂಟೆಗೆ ರಾಜಾಜಿನಗರದ 20ನೆಯ ಮುಖ್ಯರಸ್ತೆಯಲ್ಲಿರುವ ಬಸವ ಮಂಟಪದಲ್ಲಿ (ಸಿಟಿ ಆಸ್ಪತ್ರೆ ಪಕ್ಕ) ಸಾಮೂಹಿಕ ಇಷ್ಟಲಿಂಗಪೂಜೆಯೊಡನೆ ನೀಲಾಂಬಿಕಾ ಷಷ್ಠಿಯನ್ನು ಆಚರಿಸಲಾಗುವುದು. ಪೂಜಾ ಸಾಮಗ್ರಿಗಳೊಡನೆ ಶರಣ ಶರಣೆಯರು ಬಂದು ಭಾಗವಹಿಸಬೇಕು.

ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಕೂಡಲ ಸಂಗಮದ ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಈ ಮೂರು ದಿವಸಗಳ (11-12 ಮತ್ತು 13-8-2013)ಕಾರ್ಯಕ್ರಮವನ್ನು, ಉಪನ್ಯಾಸ ಮತ್ತು ನಂತರ ಗಣಪ್ರಸಾದ(ಭೋಜನ)ವನ್ನು ವ್ಯವಸ್ಥೆ ಮಾಡಿದೆ. ಆದ್ದರಿಂದ ಎಲ್ಲ ಶರಣ ಬಂಧುಗಳು ಕುಟುಂಬ ಪರಿವಾರ ಸಹಿತವಾಗಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದೇ ಅಲ್ಲದೆ ತನು-ಮನ-ಧನಗಳಿಂದ ಸಹಕರಿಸಿ ಕಾರ್ಯಕ್ರಮ ವ್ಯವಸ್ಥೆ ಮತ್ತು ಸಾಮೂಹಿಕ ಗಣ ಪ್ರಸಾದಕ್ಕಾಗಿ ಉದಾರವಾದ ದೇಣಿಗೆಯನ್ನು ಕೊಡಬೇಕೆಂದು ವಿನಂತಿಸುತ್ತೇವೆ.

ಸರ್ವರಿಗೂ ಆದರದ ಸುಸ್ವಾಗತ

ಎನ್. ಪುಟ್ಟರುದ್ರ, ಗೌರವಾಧ್ಯಕ್ಷರು ಲಿಂಗಾಯತ ಧರ್ಮ ಮಹಾಸಭಾ	ಪೂಜ್ಯ ಶ್ರೀ ಜಗದ್ಗುರು ಬಸವ ಕುಮಾರ ಸ್ವಾಮಿಗಳು ಪ್ರಧಾನ ಕಾರ್ಯದರ್ಶಿ, ಬಸವ ಮಂಟಪ

ದಿ. 12-8-2013ರ ಕಾರ್ಯಕ್ರಮ ವಿವರ

ಬೆಂಗಳೂರು ನಗರದ ಸಿಟಿ ಮಾರುಕಟ್ಟೆ ಸಮೀಪದಲ್ಲಿರುವ ಸರ್.ಕೆ.ಪಿ.ಪುಟ್ಟಣ್ಣಶೆಟ್ಟಿ ಪುರಭವನದಲ್ಲಿ ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ವತಿಯಿಂದ 818ನೆಯ ಬಸವ ಪಂಚಮಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

1. ಬೆಳಿಗ್ಗೆ 10-30 ಗಂಟೆಗೆ ಕಾರ್ಯಕ್ರಮ ಆರಂಭ.
2. ಕಾರ್ಯಕ್ರಮದ ನಂತರ 2 ಗಂಟೆಗೆ ಗಣದಾಸೋಹ (ಊಟ).
3. ಸಾಂಸ್ಕೃತಿಕ ಕಾರ್ಯಕ್ರಮ 3-00.

ಶ್ರೇಷ್ಠ ಸಮತಾವಾದಿ ವಿಶ್ವಗುರು ಬಸವಣ್ಣನವರು

(ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ಆಗಿಹೋಗಿರುವ ವಿಶ್ವಗುರು ಬಸವಣ್ಣನವರು ಶ್ರೇಷ್ಠ ಸಮಾಜ ಸುಧಾರಕರು, ಸಮತಾವಾದಿ, ಕಾರಣಿಕ ಪುರುಷರು, ಪ್ರವಾದಿಗಳು, ಲಿಂಗಾಯತ ಧರ್ಮ ಸ್ಥಾಪಕರು, ವಚನ ಸಾಹಿತ್ಯವೆಂಬ ತಾತ್ತ್ವಿಕ ಸಿರಿವಂತಿಕೆಯುಳ್ಳ ವಿನೂತನ ಸಾಹಿತ್ಯ ಪ್ರಾಕಾರವನ್ನು ಕೊಟ್ಟವರು. ವಚನ ಶಾಸ್ತ್ರದ ಮೂಲಕ ಪ್ರಗತಿಪರ ಧರ್ಮವನ್ನು ಪ್ರತಿಪಾದಿಸಿದ ಇವರು ಜಗತ್ತಿನ ಮೊಟ್ಟಮೊದಲ ಸಮತಾವಾದಿ. ಧಾರ್ಮಿಕ-ಸಾಮಾಜಿಕ-ಆರ್ಥಿಕ ಸಮಾನತೆಗಳನ್ನು ತರಲು ಪ್ರಯತ್ನಿಸಿದ ಬಸವಣ್ಣನವರ ೮೮೦ನೆಯ ಜಯಂತಿಯು ಇದೇ ಮೇ 13ರಂದು ಒದಗಿ ಬಂದಿರುವ ನಿಮಿತ್ತ, ಓದುಗರಿಗೆ ಶುಭಾಶಯ ಸಲ್ಲಿಸುತ್ತ ಈ ವಿಶೇಷ ಲೇಖನವನ್ನು ಪ್ರಕಟಿಸಲಾಗಿದೆ.)

ಭಾರತ ಮಾತೆಯ ಸಿರಿ ಮುಡಿಗೆ ವಿನೂತನ ಧಾರ್ಮಿಕ ಮತ್ತು ಸಾಮಾಜಿಕ ತತ್ತ್ವಗಳನ್ನೊಳಗೊಂಡ ವಚನ ಸಾಹಿತ್ಯದ ಕಿರೀಟವನ್ನು ಏರಿಸಿದ ವಿಶ್ವಗುರು ಬಸವಣ್ಣನವರು ಬದುಕಿ, ಬೆಳಗಿದ್ದು 12ನೆಯ ಶತಮಾನದಲ್ಲಿ. ಗುರು ಬಸವಣ್ಣನವರ ಪೂರ್ವಜರು ತೆಲುಗು ದೇಶದಿಂದ ವಲಸೆ ಬಂದು ನೆಲೆಸಿದ ಕಮ್ಮೆ ಕುಲದ ಶೈವ ಬ್ರಾಹ್ಮಣರು. ಇವರ ತಂದೆ ಇಂಗಳೇಶ್ವರ ಬಾಗೇವಾಡಿ ಗ್ರಾಮದ ಪ್ರಮುಖ, ಅಗ್ರಹಾರದ ಶಿಖಾಮಣಿ-ಮಾದಿರಾಜ. ತಾಯಿ ಮಾದಲಾಂಬಿಕೆ. ಈ ಕಮ್ಮೆ ಕುಲದ ಬ್ರಾಹ್ಮಣ ದಂಪತಿಗಳಾದ ಮಾದಿರಾಜ-ಮಾದಲಾಂಬಿಕೆಯರ ಸತ್ಸಂಕಲ್ಪ, ಸದ್ವ್ರತಗಳ ಸಾಕಾರ ಮೂರ್ತಿಯಾಗಿ ಬಸವಣ್ಣನವರು ಜನಿಸಿದರು. ಇವರು ಬಾಲ್ಯದಿಂದಲೂ ವಿಚಾರಶೀಲರು, ತೀಕ್ಷ್ಣಮತಿ, ಸೂಕ್ಷ್ಮಗ್ರಾಹಿ. ಪ್ರತಿಯೊಂದು ನಂಬಿಕೆ, ಆಚಾರ-ವಿಚಾರಗಳನ್ನು ಆಳವಾಗಿ ಆಲೋಚಿಸುವ ಚಿಕಿತ್ಸಕ ಬುದ್ಧಿಯುಳ್ಳವರು.

ವೈದಿಕ ಮತಾನುಯಾಯಿಗಳಾದ ಮಾದರಸರ ಏಕೈಕ ಪುತ್ರ ಬಸವಣ್ಣನವರು ಮನೆತನದ ಸಂಪ್ರದಾಯಕ್ಕೆ ಅನುಗುಣವಾಗಿ ಉಪನಯನವನ್ನು ಮಾಡಿಸಿಕೊಳ್ಳಬೇಕಾಗಿ ಬಂದಾಗ, ತಮ್ಮ ಹಿರಿಯ ಸೋದರಿ ಅಕ್ಕನಾಗಲಾಂಬಿಕೆಗೂ ಉಪನಯನವಾಗಬೇಕೆಂದು ಹಠ ಹಿಡಿದರು. ಸಂಪ್ರದಾಯದಲ್ಲಿ ಇದಕ್ಕೆ ಅವಕಾಶವಿಲ್ಲವೆಂದು ತಂದೆ ಮಾದರಸ ತಿಳಿಸಿದಾಗ ಬಾಲಕ ಬಸವಣ್ಣ ತಾನು ಉಪನಯನ ಮಾಡಿಸಿಕೊಳ್ಳಲು ಸಮ್ಮತಿಸಲಿಲ್ಲ. ವರ್ಣಾಶ್ರಮ ಧರ್ಮದ ಕಟ್ಟುಪಾಡು, ಅದು ಸೃಷ್ಟಿಸಿದ್ದ ಜಾತಿ ವ್ಯವಸ್ಥೆ, ಅದರ ಪರಿಣಾಮವಾದ ಅಸ್ಪೃಶ್ಯತೆ; ಇವುಗಳಿಂದ ಮನನೊಂದಿದ್ದ ಬಸವಣ್ಣನವರು ಹೆತ್ತತಾಯಿ ತಂದೆಯರನ್ನು ಹುಟ್ಟಿದ್ದ ಮತವನ್ನು ತೊರೆಯಲು ನಿರ್ಧರಿಸಿದರು. ಹೀಗೆ ತಾಯಿ ತಂದೆಯರ ಪ್ರೇಮ-ವ್ಯಾಮೋಹ, ಸಂಪ್ರದಾಯದ ಕಟ್ಟುಪಾಡುಗಳನ್ನು ತೊರೆದು ಕೂಡಲ ಸಂಗಮಕ್ಷೇತ್ರಕ್ಕೆ ಬಂದರು. ಆಗ ಅದು ಜಾತವೇದಮುನಿಗಳೆಂಬ ಜ್ಞಾನಿಗಳ ಮಾರ್ಗದರ್ಶನದಲ್ಲಿ ಶೈವ ಪಾಶುಪತ ಸಂಪ್ರದಾಯದ ವಿದ್ಯಾಭ್ಯಾಸ ಕೇಂದ್ರವಾಗಿತ್ತು.

ಆಗಮಿಸಿದ ಬಾಲಕನ ಆಧ್ಯಾತ್ಮಿಕ ಹಂಬಲ, ಚಿಕಿತ್ಸಕ ಬುದ್ಧಿ, ಪ್ರತಿಭಾತ್ಮಕ ವ್ಯಕ್ತಿತ್ವ ಕಂಡು ಮಾರುಹೋದ ಜಾತವೇದ ಮುನಿಗಳು ಬಸವಣ್ಣನಿಗೆ ಕೂಡಲ ಸಂಗಮದ ಗುರುಕುಲದಲ್ಲಿದ್ದು ಅಭ್ಯಾಸ ಮಾಡಲು ಅನುಮತಿ ಕೊಟ್ಟರಷ್ಟೇ ಅಲ್ಲ, ಅರ್ಚಕನಾಗಿ ಸಂಗಮೇಶ್ವರನ ಪೂಜೆ ಮಾಡಲು ಅವಕಾಶ ಕಲ್ಪಿಸಿದರು. ಸುಮಾರು 8-9 ವರ್ಷಗಳ ಬಾಲಕನಾಗಿ ಆಗಮಿಸಿದ ಬಸವಣ್ಣನವರು 21ರ ತರುಣನಾಗುವವರೆಗೆ ವಿದ್ಯಾರ್ಜನೆ ಮಾಡಿದರು. ಜೊತೆಗೆ ವೇದಶಾಸ್ತ್ರ ಪುರಾಣಗಳ ಅಧ್ಯಯನ, ಯೋಗಸಾಧನೆ ಇತ್ಯಾದಿ ಎಲ್ಲ ಕ್ಷೇತ್ರಗಳಲ್ಲೂ ಪರಿಣಿತರಾದರು. ಪ್ರಚಲಿತವಿದ್ದ ಶೈವ-ವೈದಿಕ ಎರಡೂ ಧರ್ಮಗಳ ಕೆಲವು ತತ್ತ್ವಗಳು-ನಂಬಿಕೆಗಳು, ಆಚರಣೆಗಳು ಸರಿ ಬಂದರೆ ಮತ್ತೆ ಕೆಲವು ಸರಿಕಾಣಲಿಲ್ಲ. ವೈದಿಕ ಧರ್ಮದ ಜ್ಞಾನಕಾಂಡವು ಮನಸ್ಸನ್ನು ತಣಿಸಿ, ಬುದ್ಧಿಯನ್ನು ಪ್ರಚೋದಿಸಿದರೆ ಯಜ್ಞ-ಯಾಗಾದಿಗಳಿಂದ ಕೂಡಿದ ಕರ್ಮಕಾಂಡವು ಜಿಗುಪ್ಸೆಯನ್ನು ಹುಟ್ಟಿಸಿತು. ಶೈವ ಧರ್ಮದ ಭಕ್ತಿಯು

ಸೂಜಿಗಲ್ಲಿನಂತೆ ಸೆಳೆಯುತ್ತಿದ್ದರೆ ದೀಪದೊಳಗಣ ಮಕ್ಕಿ (ಕುಡಿ) ನಂತೆ ಅದರೊಡನೆಯೇ ಮೇಳವಿಸಿದ್ದ ಅತಿರೇಕದ ಭಕ್ತಿ ಮತ್ತು ಮೂಢತೆಗಳು ತಿರಸ್ಕಾರವನ್ನು ಹುಟ್ಟಿಸಿದ್ದವು. ಯಾವ ಒಂದು ವಿಶಿಷ್ಟ ಸಂಪ್ರದಾಯವೂ ಅವರಿಗೆ ಸಂಪೂರ್ಣ ತೃಪ್ತಿಯನ್ನು ನೀಡಲಿಲ್ಲ.

"ನೂತನ ಪಥವೊಂದನ್ನು ಸೃಷ್ಟಿಸಬೇಕು. ಆ ಪಥದ ಅತ್ತಿತ್ತ ಪ್ರಗತಿ ಪರ ತತ್ತ್ವ ಮತ್ತು ಸಮತಾವಾದದ ಸಾಲುಮರಗಳನ್ನು ಬೆಳೆಸಬೇಕು ! ಆ ವಿಶ್ವಧರ್ಮದ ಹೆದ್ದಾರಿಯಲ್ಲಿ ಮಾನವ ಕುಲಕ್ಕೆ ಬೆಳಕು ನೀಡಬಲ್ಲ ಸಂದೇಶಗಳ ದೀಪಸ್ತಂಭಗಳನ್ನು ಇಡಬೇಕು". ಎಂದು ಕನಸು ಕಾಣುತ್ತ ಸಾಧನೆ ಮಾಡುತ್ತಲಿರುವಾಗಲೇ ಬಸವಣ್ಣನವರ ಹೃದಯದಲ್ಲಿ ಸ್ವತಂತ್ರ ಧರ್ಮವೊಂದು ರೂಪುಗೊಳ್ಳತೊಡಗಿತು. ಒಂದು ದಿವಸ ಪರಮಾತ್ಮನ ದಿವ್ಯದರ್ಶನವಾಗಿ ಕಲ್ಯಾಣಕ್ಕೆ ಹೋಗೆಂಬ ಆದೇಶ ಪ್ರಾಪ್ತಿಯಾಯಿತು. ಅಂದು ವಿಶ್ವಾತ್ಮನ ಕುರುಹಾದ ಇಷ್ಟಲಿಂಗದ ಪರಿಕಲ್ಪನೆ (Concept) ಮೈದಳೆಯಿತು. "ಲಿಂಗದೇವರು ನಿರಾಕಾರನು, ನಿರ್ಗುಣನು, ನಿರವಯವನು. ಅವನನ್ನು ಮಾನವರ, ಪಶುಪಕ್ಷಿ ಪ್ರಾಣಿಗಳ ಆಕಾರದಲ್ಲಿ ಪೂಜಿಸಬಾರದು. ದೇವನ ಕೊಡುಗೆ, ಕಾರ್ಯ ಈ ಬ್ರಹ್ಮಾಂಡ, ಬ್ರಹ್ಮಾಂಡದ ಆಕಾರದಲ್ಲೇ ವಿಶ್ವಾತ್ಮನನ್ನು ಪೂಜಿಸಬೇಕು." ಎಂಬ ಅರಿವು ಉಂಟಾಗಿ ಬಸವಣ್ಣನವರು ಇಷ್ಟಲಿಂಗವನ್ನು ರೂಪುಗೊಳಿಸಿದರು. ಈ ಗೋಳಾಕಾರವನ್ನು ಹೊರಗಿನ ಕಂತೆಯ ಕವಚಕ್ಕೆ ಕೊಟ್ಟು ಅದರೊಳಗೆ ಪಿಂಡಾಂಡದ ಸಾಕಾರವಾದ ಪಂಚಸೂತ್ರಲಿಂಗವನ್ನಿಟ್ಟು, 'ದೇವನೊಳಗೆ ಜೀವನಿದ್ದಾನೆ, ಬ್ರಹ್ಮಾಂಡದೊಳಗೆ ಪಿಂಡಾಂಡವಿದೆ.' ಎಂಬ ಸಂಕೇತದೊಡನೆ ಇಷ್ಟಲಿಂಗವನ್ನು ರೂಪಿಸಿದರು. ಈ ಇಷ್ಟಲಿಂಗವೇ ಬಸವಣ್ಣನವರು ರಚಿಸಬಯಸಿದ ಜಾತಿವರ್ಣ ವರ್ಗರಹಿತ ಧರ್ಮಸಹಿತ ಕಲ್ಯಾಣರಾಜ್ಯ ನಿರ್ಮಾಣದ ಕೇಂದ್ರ ಸೂತ್ರವಾಯಿತು. ಚಾಲುಕ್ಯರ ರಾಜಧಾನಿ ಕಲ್ಯಾಣವನ್ನು ಪ್ರವೇಶಿಸಿದ ಬಸವಣ್ಣನವರು ಅನುಭವ ಮಂಟಪ ಎಂಬ ಆಧ್ಯಾತ್ಮಿಕ ವಿಶ್ವವಿದ್ಯಾಲಯವನ್ನು ಕಟ್ಟಿದರು. ಜಾತಿಮತ ಪಂಥಾತೀತವಾಗಿ ಎಲ್ಲರನ್ನು ಇಂಬಿಟ್ಟುಕೊಂಡರು. ಸಂಸ್ಕಾರ ನೀಡಿದರು. ಸಮಾನ ಸ್ಥಾನಕೊಟ್ಟರು. ಕರಣಿಕರಾಗಿ ರಾಜನ ಆಸ್ಥಾನವನ್ನು ಪ್ರವೇಶಿಸಿದ ಅವರು ಮುಂದೆ ಭಂಡಾರಿಯಾಗಿ, ಅರ್ಥಮಂತ್ರಿಯಾಗಿ, ಪ್ರಧಾನಿಯೂ ಆದರು.

ಅನುಭವ ಮಂಟಪವು ಒಂದು ಅಭೂತಪೂರ್ವ ಸಂಸ್ಥೆ. ಬಸವಣ್ಣನವರು ಹಮ್ಮಿಕೊಂಡ ಕಾರ್ಯವಿಸ್ತಾರದಿಂದಾಗಿ ದೇಶದಾದ್ಯಂತದಿಂದ ಜನರು ಕಲ್ಯಾಣ ಪಟ್ಟಣಕ್ಕೆ ಧಾವಿಸತೊಡಗಿದರು. ವೀರವೈರಾಗ್ಯನಿಧಿ ಅಲ್ಲಮಪ್ರಭುದೇವರು ಹೇಳುವಂತೆ :

"ಕಲ್ಯಾಣವೆಂಬ ಪ್ರಣತೆಯಲ್ಲಿ ಭಕ್ತಿರಸವೆಂಬ ತೈಲವನೆರೆದು ಆಚಾರವೆಂಬ ಬತ್ತಿಯಲ್ಲಿ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು ತೊಳಗಿ ಬೆಳಗುತ್ತಿದ್ದಿತಯ್ಯಾ ಶಿವನಪ್ರಕಾಶ. ಆ ಪ್ರಕಾಶದೊಳಗೆ ಒಪ್ಪುತ್ತಿದ್ದರಯ್ಯ ಅಸಂಖ್ಯಾತ ಪ್ರಮಥಗಣಂಗಳು."

ಕಲ್ಯಾಣವೇ ಪ್ರಣತೆಯಾಯಿತು, ಭಕ್ತಿರಸವೇ ತೈಲವಾಯಿತು. ಆಚಾರವೇ ಬತ್ತಿಯಾಯಿತು. ಬಸವಣ್ಣನವರೇ ಜ್ಯೋತಿಯಾಗಿ ಸ್ಪರ್ಶಿಸಲು ಶಿವನ ಪ್ರಕಾಶವು ತೊಳಗಿ ಬೆಳಗತೊಡಗಿತು. ಆ ಬೆಳಕಿನಲ್ಲಿ ತಮ್ಮ ಬಾಳಿನ ಹಣತೆಗಳನ್ನು ಹೊತ್ತಿಸಿಕೊಳ್ಳಲೆಂದು ಅಸಂಖ್ಯಾತ ಸಾಧಕರು ಸಿದ್ಧಪುರುಷರು, ಸತ್ಯದ ಸಾಧಕರು-ಶೋಧಕರು ಕಲ್ಯಾಣಕ್ಕೆ ಧಾವಿಸಿದರು. ಸುಂದರ ಬಂಧುರ ಸಮಾಜ ರಚನೆಯಾಯಿತು.

ವಿಶ್ವಗುರು ಬಸವಣ್ಣನವರು ವ್ಯಕ್ತಿ-ಸಮಾಜಗಳ ಸರ್ವಾಂಗೀಣ ವಿಕಾಸಕ್ಕೆ ಬೇಕಾದ ಎಲ್ಲ ಮೌಲ್ಯಗಳನ್ನು ಪ್ರತಿಪಾದಿಸಿರುವರು. ಈ ಲೇಖನದ ಸೀಮಿತತೆಯ ದೃಷ್ಟಿಯಿಂದ ಆ ಎಲ್ಲ ಅಂಶಗಳನ್ನು ಪ್ರತಿಪಾದಿಸಲು ನಾನು ಹೋಗದೆ ಕೇವಲ ಸಮತಾವಾದದ ಮೇಲೆ ಗಮನವನ್ನು ಕೇಂದ್ರೀಕರಿಸುವೆ. "ಸಮತೆ" ಎಂದರೆ ಏರುಪೇರು, ಮೇಲು-ಕೀಳು ಎಂಬ ಭೇದವಿಲ್ಲದ ಸಮಪಾತಳಿಯ ವ್ಯವಸ್ಥೆ. ಭಾರತೀಯ ಸಮಾಜ ವ್ಯವಸ್ಥೆಯು ಇಂತಹ ಸಮಪಾತಳಿಯ (Horizontal) ಮಟ್ಟವನ್ನು ಹೊಂದಿರದೆ ಶ್ರೇಣೀಕೃತ (Ladder Type) ವರ್ಗೀಕರಣ ವ್ಯವಸ್ಥೆಯನ್ನು ಹೊಂದಿತ್ತು. ಇದರ

ಪರಿಣಾಮವಾಗಿ ನಾಲ್ಕು ವರ್ಣಗಳಿಂದ ಹೊರತಾದ ಐದನೆಯ ಪಂಚಮವರ್ಣವೇ ಅಸ್ಪೃಶ್ಯರ ಗುಂಪು. ಈ ಪಂಚಮ ವರ್ಣೀಯರಿಗೆ ಧರ್ಮಸಂಸ್ಕಾರ ಲಭ್ಯವಾಗುತ್ತಿರಲಿಲ್ಲ; ಅಷ್ಟು ಮಾತ್ರವಲ್ಲದೆ ಅವರು ಉಳಿದ ವರ್ಣೀಯರನ್ನು ಸೋಂಕುವಂತೆಯೂ ಇರಲಿಲ್ಲ.

ಈ ಭೇದಕ್ಕೆ ಮುಖ್ಯ ಕಾರಣಗಳು ಅವರು ಹುಟ್ಟಿದ ಜಾತಿ ಮತ್ತು ಕೈಗೊಂಡ ಉದ್ಯೋಗ. ಇಂಥ ವ್ಯವಸ್ಥೆಗೆ ಒಗ್ಗಿಕೊಂಡು ಸವರ್ಣೀಯರು ಅವರ್ಣೀಯರು ಉಭಯತರೂ ಅದನ್ನು ಪಾಲಿಸುತ್ತಿದ್ದುದಲ್ಲದೆ ಈ ವ್ಯವಸ್ಥೆಯು ದೇವನಿರ್ಮಿತವೆಂದು ದೃಢವಾಗಿ ನಂಬಿದ್ದರು. ಇಂಥ ಪ್ರಸಂಗದಲ್ಲಿ 'ನಾವು ಹುಟ್ಟುತ್ತಲೇ ಶ್ರೇಷ್ಠರು' ಎಂದು ಹಮ್ಮು ತಳೆದ ಮೇಲ್ವರ್ಣೀಯರನ್ನು "ನಾವು ಹಿಂದಿನ ಪಾಪದಿಂದಲೇ ಕೀಳು ಜಾತಿಯಲ್ಲಿ ಹುಟ್ಟಿದವರು.' ಎಂಬ ಕೀಳರಿಮೆ ಬೆಳೆಸಿಕೊಂಡ ಶೂದ್ರರು ಮತ್ತು ಅಸ್ಪೃಶ್ಯರನ್ನು ಉಭಯತರನ್ನೂ ತಿದ್ದುವ ಗಂಭೀರ ಕಾರ್ಯವನ್ನು ಗುರು ಬಸವಣ್ಣನವರು ಕೈಗೊಂಡರು.

ಹೊಲೆಗಂಡಲ್ಲದೆ ಪಿಂಡದ ನೆಲೆಗೆ ಆಶ್ರಯವಿಲ್ಲ
ಜಲಬಿಂದುವಿನ ವ್ಯವಹಾರವೊಂದೆ
ಆಸೆ-ಆಮಿಷ-ರೋಷ-ಹರುಷ-ವಿಷಯಾದಿಗಳೆಲ್ಲ ಒಂದೇ.
ಏನನೋದಿ ಏನ ಕೇಳಿ ಏನು ಫಲ ?
ಕುಲಜನೆಂಬುದಕ್ಕೆ ಯಾವುದು ದೃಷ್ಟ ?
ಸಪ್ತಧಾತು ಸಮಪಿಂಡಂ ಸಮಯೋನಿ ಸಮುದ್ಭವಂ
ಆತ್ಮ-ಜೀವ ಸಮಾಯುಕ್ತಂ ವರ್ಣಾನಾಂ ಕಿಂ ಪ್ರಯೋಜನಂ ?
ಕಾಸಿ ಕಮ್ಮಾರನಾದ ಬೀಸಿ ಮಡಿವಾಳನಾದ
ಹಾಸನಿಕ್ಕಿ ಸಾಲಿಗನಾದ ವೇದವನೋದಿ ಹಾರುವನಾದ
ಕರ್ಣದಲಿ ಜನಿಸಿದವರುಂಟೆ ? ಲಿಂಗದೇವಾ,
ಇದು ಕಾರಣ, ಲಿಂಗಸ್ಥಲವನರಿದವನೇ ಕುಲಜನು"

ಎಲ್ಲರೂ ಹುಟ್ಟುವುದು ಒಂದೇ ಬಗೆಯಲ್ಲಿಯೆ ! ಹುಟ್ಟಿ ಬಂದಾನಂತರದ ಶಾರೀರಿಕ ಚಟುವಟಿಕೆಗಳೂ ಒಂದೇ ! ಆಸೆ-ಆಮಿಷ-ರೋಷ-ಹರುಷ ಮುಂತಾದ ಮಾನಸಿಕ ಚಟುವಟಿಕೆಗಳೂ ಒಂದೇ! ಮಾನವ ಶರೀರಗಳು ಸಪ್ತಧಾತುಗಳಿಂದ ಆಗಿವೆ. ಆತ್ಮ-ದೇಹಗಳ ಸಮಾಗಮ ಎಲ್ಲರಲ್ಲಿಯೂ ಇದೆ. ಅಂದಾಗ ಹುಟ್ಟು ಮತ್ತು ಅದನ್ನು ಬೆನ್ನಿಗೆ ಕಟ್ಟಿಕೊಂಡು ಇರುವ ಜಾತಿ ಇವುಗಳ ಆಧಾರದ ಮೇಲೆ ಮಾನವರನ್ನು ಮೇಲು-ಕೀಳು ಎನ್ನಲು ಬರುವುದೇ ?

ಇನ್ನು ಉದ್ಯೋಗಕ್ಕೆ ಬರೋಣ. ಯಾವ ಕಾಯಕವನ್ನು ಕೀಳು ಎನ್ನಬಹುದು. ಸಮಾಜ-ರಾಷ್ಟ್ರಗಳ ಹಿತಾಸಕ್ತಿಯ ದೃಷ್ಟಿಯಿಂದ ಎಲ್ಲ ಕಾಯಕಗಳೂ ಅತ್ಯಗತ್ಯವೇ! ಮತ್ತು ವ್ಯಕ್ತಿಯ ಹುಟ್ಟಿಗೂ ಉದ್ಯೋಗಕ್ಕೂ ನಿಕಟ ಸಂಬಂಧ ಇಡಬಾರದು. ಉದ್ಯೋಗದ ಆಯ್ಕೆಯು ವ್ಯಕ್ತಿಯ ಅಭಿರುಚಿ, ಸಾಮರ್ಥ್ಯವನ್ನು ಅವಲಂಬಿಸಿ ಇರಬೇಕೇ ವಿನಾ ಹುಟ್ಟನ್ನಲ್ಲ. ಕಬ್ಬಿಣ ಕಾಸುವವ ಕಮ್ಮಾರ, ಬಟ್ಟೆ ತೊಳೆಯುವವನು ಮಡಿವಾಳ, ಬ್ರಹ್ಮಜ್ಞಾನವನ್ನು ಪಡೆದವನು ಬ್ರಾಹ್ಮಣ ಹೀಗೆ ಹೆಸರಿಸಬೇಕೇ ವಿನಾ ಕಮ್ಮಾರನ ಮಗ ಕಬ್ಬಿಣವನ್ನೇ ಕಾಸಬೇಕು, ಮಡಿವಾಳನ ಮಗ ಬಟ್ಟೆಯನ್ನೇ ತೊಳೆಯಬೇಕು, ಬ್ರಾಹ್ಮಣನ ಮಗ ಮಾತ್ರ ಬ್ರಹ್ಮಜ್ಞಾನ ಪಡೆಯಬೇಕು ಎನ್ನುವುದು ತಪ್ಪು. ಶ್ರೇಷ್ಠತ್ವವನ್ನು ಪಡೆಯುವ ಸಾಧನ ಜಾತಿಯಲ್ಲ, ಉದ್ಯೋಗವಲ್ಲ ನೀತಿ ಮತ್ತು ಪರಮಾತ್ಮನ ಜ್ಞಾನ.

ಹೀಗೆ ಹೇಳಿದ ಬಸವಣ್ಣನವರು ವರ್ಣವ್ಯವಸ್ಥೆಯನ್ನು ನಿರಾಕರಿಸಿ, ಎರಡೇ ವಿಂಗಡಣೆ ಮಾಡಿದರು.

ಉಂಬ ಬಟ್ಟಲು ಬೇರೆ ಕಂಚಲ್ಲ.
ಕಾಂಬ ದರ್ಪಣ ಬೇರೆ ಕಂಚಲ್ಲ

ಭಾಂಡ ಒಂದೇ ಭಾಜನ ಬೇರೆ
ಬೆಳಗೇ ಕನ್ನಡಿ ಎನ್ನಿಸಿತ್ತಯ್ಯಾ
ಅರಿದೊಡೆ ಶರಣ ಮರೆದೊಡೆ ಮಾನವ
ಮರೆಯದೆ ಪೂಜಿಸು ಲಿಂಗದೇವನ !

ಎಲ್ಲರೂ ಹುಟ್ಟುತ್ತ ಮಾನವರು, ಅವರು ಅರಿವಿನಿಂದ ಶರಣರಾಗುವರು. ಕಂಚು ಎಂಬ ಲೋಹದಿಂದಲೇ ಉಣ್ಣುವ ತಟ್ಟೆ ಮತ್ತು ನೋಡುವ ಕನ್ನಡಿ ಎರಡೂ ಸಿದ್ಧವಾಗುವುವು. ಬೆಳಗನ್ನು ಪ್ರತಿಫಲಿಸುವ ಶಕ್ತಿಯು ಕಂಚಿಗೆ ಕನ್ನಡಿತನವನ್ನು ತಂದುಕೊಡುವಂತೆ, ಜ್ಞಾನಶಕ್ತಿಯು. ಮರೆದ ಮಾನವ ಅರಿದ ಶರಣನಾಗಬೇಕಾದರೆ ಪರಮಾತ್ಮನ ಉಪಾಸನೆಯನ್ನು ಮಾಡಬೇಕು. ಅವನ ಕೃಪೆಯನ್ನು ಪಡೆಯಬೇಕು. ಹೀಗೆ ಹೇಳಿ ಗುರು ಬಸವಣ್ಣನವರು ಸುಮ್ಮನೇ ಕೂರದೆ ಸಂಸ್ಕಾರ ಪಡೆಯುವ ಸದವಕಾಶವನ್ನು ಎಲ್ಲರಿಗೂ ಕೊಟ್ಟು ಶೋಷಿತರಿಗೆ ಧಾರ್ಮಿಕ ಸಮಾನತೆಯನ್ನು ಒದಗಿಸಿಕೊಟ್ಟರು.

ಗುರು ಬಸವಣ್ಣನವರ ಸಮತಾವಾದದ ಸಂಸ್ಕಾರಕ್ಕೆ ಮಹಿಳಾ ವರ್ಗವೂ ಒಳಗಾಗಿ ಅಕ್ಕಮಹಾದೇವಿಯಂಥ ಉನ್ನತ ಮಟ್ಟದ ವಿರಾಗಿಣಿ ರೂಪುಗೊಂಡಳು. ಆಕೆ ಶ್ರೇಷ್ಠ ತತ್ತ್ವಜ್ಞಾನಿಯೂ ಕವಯಿತ್ರಿಯೂ ಆಗಿ ಅನುಭವ ಮಂಟಪದಲ್ಲಿ ಗಣ್ಯ ಸ್ಥಾನವನ್ನು ಪಡೆದಳು.

ದೀಕ್ಷಾ ಸಂಸ್ಕಾರವನ್ನು ಪಡೆದ ಬಳಿಕ ದೀಕ್ಷಿತರ ಪೂರ್ವಾಶ್ರಮ ನಿರಸನವಾಗುವ ಕಾರಣ ಅವರಲ್ಲಿ ಜಾತಿಯನ್ನಾಗಲೀ, ಕುಲವನ್ನಾಗಲೀ ಹುಡುಕಬಾರದು. ಮತ್ತು ಅವನ ಉದ್ಯೋಗವನ್ನು ಹಿಡಿದು ಮೇಲು ಕೀಳು ಎನ್ನಬಾರದು ಎಂದು ಸಂಪೂರ್ಣ ಸಮಾನತೆಯನ್ನು ಬಸವಣ್ಣನವರು ಬೋಧಿಸಿದರು.

ದೇವ ಸಹಿತ ಭಕ್ತ ಮನೆಗೆ ಬಂದರೆ
ಕಾಯಕವಾವುದೆಂದು ಬೆಸಗೊಂಡರೆ
ನಿಮ್ಮಾಣೆ ನಿಮ್ಮ ಪ್ರಮಥರಾಣೆ, ತಲೆದಂಡ । ತಲೆದಂಡ
ಲಿಂಗದೇವಾ ಭಕ್ತರಲ್ಲಿ ಕುಲವನರಸಿದಡೆ,
ಎನ್ನ ರಾಣಿವಾಸದಾಣೆ.

ಬಸವಣ್ಣನವರು ಈ ಜಗತ್ತನ್ನು ಮಾಯೆ ಎಂದಾಗಲೀ, ಮಿಥ್ಯ ಎಂದಾಗಲಿ ಕರೆಯಲಿಲ್ಲ. ಈ ಜಗತ್ತನ್ನು ಜೀವನವನ್ನು ದೇಹವನ್ನು ಗೌರವಭಾವದಿಂದ ಕಂಡು ಇವು ದೇವರನ್ನು ಒಲಿಸುವ ಸಾಧನಗಳು ಎಂದು ಭಾವಿಸಿದರು.

* ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ
* ಲಿಂಗದೇವರನು ಒಲಿಸಲು ಬಂದ ಪ್ರಸಾದ ಕಾಯವಿದನ್ನು ಕೆಡಿಸಲಾಗದು.

ಈ ಜೀವನವು ಯುದ್ಧ ಭೂಮಿಯಂತೆ; ಜೀವಾತ್ಮನು ಸಶಸ್ತ್ರ ಯೋಧನಂತೆ ವೀರಯೋಧನು ಹೇಗೆ ಪಲಾಯನ ಮಾಡುವುದಿಲ್ಲವೋ ಹಾಗೆ ನಿಜಭಕ್ತನು ಬಾಳಿನ ಸಂಕಷ್ಟಗಳಿಗೆ ಬೆನ್ನು ತೋರಿಸಬಾರದು. ಕೆಲವೊಮ್ಮೆ ಲೋಕದ ಜನರು ಕಷ್ಟ-ನಿಂದೆಗಳನ್ನು ಹೇರುವುದತ್ತಲಿರಲಿ ಸ್ವತಃ ದೇವನೇ ತನ್ನ ಭಕ್ತರ ಸ್ಥೈರ್ಯ ಪರೀಕ್ಷೆಗಾಗಿ ಕಷ್ಟಗಳನ್ನು ಒಡ್ಡುವುದುಂಟು.

ಜಂಬೂದ್ವೀಪ ನವಖಂಡ ಪೃಥ್ವಿಯೊಳಗೆ
ಕೇಳಿರಯ್ಯಾ ಎರಡಾಳಿನ ಭಾಷೆಯ
ಕೊಲುವೆನೆಂಬ ಭಾಷೆ ದೇವನದು
ಗೆಲುವೆನೆಂಬ ಭಾಷೆ ಭಕ್ತನದು
ಸತ್ಯವೆಂಬ ಕೂರಲಗನೇ ತಳೆದುಕೊಂಡು
ಸದ್ಭಕ್ತರು ಗೆದ್ದರು ಕಾಣಾ ಲಿಂಗದೇವಾ ॥

ಇಂಥ ದೇವ-ಭಕ್ತರ ಹೋರಾಟದಲ್ಲಿ ಅಂತಿಮ ಗೆಲುವು ಭಕ್ತನದಾದರೆ ಸೋಲು ದೇವನದು ! ಏಕೆಂದರೆ ಭಕ್ತನ ಕೈಯಲ್ಲಿ ಸತ್ಯ ಎಂಬ ಶಸ್ತ್ರವಿದೆ

ಹೀಗೆ ಸ್ವಭಾವತಃ ಹೋರಾಟಗಾರರಾದ ಬಸವಣ್ಣನವರು ಸುಂದರ ಬಂಧುರ ಸಮಾಜವನ್ನು ಕಟ್ಟಲು ಒಂದು ದೊಡ್ಡ ಚಳುವಳಿಯನ್ನೇ ಕೈಗೊಂಡರು. ಸುಮಾರು 36 ವರ್ಷಕಾಲ ಅನುಭವ ಮಂಟಪ ನಡೆಸಿ, 63 ವರ್ಷಕಾಲ ಜೀವಿಸಿದ್ದ ಬಸವಣ್ಣನವರು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿಯಂದು ಉರಿಯುಂಡ ಕರ್ಪುರದಂತೆ, ಸಮುದ್ರವನ್ನು ಬೆರೆದ ನದಿಯಂತೆ ದೇವನಲ್ಲಿ ಒಡವೆರೆದು ಒಂದಾದರು. ಶ್ರೇಷ್ಠ ಸಮಾಜ ಸುಧಾರಕರಾಗಿ ನಂತರ ಬಂದ ಎಲ್ಲ ಸುಧಾರಕರಿಗೂ ಬಸವಣ್ಣನವರು ಉತ್ತಮ ಮಾದರಿಯಾಗಿ ನಿಲ್ಲುವರು. ■

ಬಸವ ಗಂಗೋತ್ರಿ ವೃದ್ಧಾಶ್ರಮ ಕಟ್ಟಡ ಧನ ಸಹಾಯಕ್ಕೆ ಮನವಿ

ಮಕ್ಕಳಿಲ್ಲದ ವೃದ್ಧರು, ಮಕ್ಕಳಿದ್ದೂ ಕೈಬಿಟ್ಟ ವೃದ್ಧರು, ಯಾವುದೇ ಆಸರೆಯಿಲ್ಲದ ವೃದ್ಧರಿಗೆ ಬಸವ ಗಂಗೋತ್ರಿಯ ವೃದ್ಧಾಶ್ರಮ ಒಂದು ಆಶ್ರಯ ಸ್ಥಾನವಾಗಿದೆ. ಏನೊಂದೂ ಆರ್ಥಿಕ ಬಲವಿಲ್ಲದ ಮುದುಕರಿಗೆ ಉಚಿತವಾಗಿ ಊಟ-ವಸತಿ-ವೈದ್ಯಕೀಯ ವ್ಯವಸ್ಥೆ ಮಾಡಲಾಗುತ್ತಿದೆ. ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್‌ಗೆ ಬರುವ ದೇಣಿಗಯಿಂದ ವೃದ್ಧಾಶ್ರಮ ನಡೆಸಲಾಗುತ್ತಿದೆ. ಆದ್ದರಿಂದ ಪರೋಪಕಾರ ಮಾಡಬೇಕೆಂಬ ದಾನಿಗಳು ತಮ್ಮ ಕೈಲಾದ ಧನಸಹಾಯ ಮಾಡಬಹುದು. ಈಗ ಲಭ್ಯವಿರುವ ವಸತಿ ವ್ಯವಸ್ಥೆ ಸುಮಾರು 25ಜನರಿಗೆ ಸಾಲುತ್ತದೆ. ದಿನ ನಿತ್ಯವೂ ನಿಸ್ಸಹಾಯಕರಾದ ವೃದ್ಧರು ಪ್ರವೇಶ ಕೋರಿ ಬರುತ್ತಾರೆ. ಆದರೆ ಸ್ಥಳಾಭಾವದಿಂದ ಪ್ರವೇಶ ಕೊಡಲು ಆಗುತ್ತಿಲ್ಲ. ಈಗ ತುರ್ತಾಗಿ ವೃದ್ಧರಿಗಾಗಿ ಒಂದು ಕಟ್ಟಡ ಆಗಲೇ ಬೇಕಾಗಿದೆ. ಆದ್ದರಿಂದ ದಾನಿಗಳು ಮಾನವೀಯ ಅನುಕಂಪದಿಂದ ಧನ ಸಹಾಯಕ್ಕೆ ಮುಂದಾಗಬೇಕೆಂದು ಕೋರುತ್ತೇವೆ.

ಒಂದು ಲಕ್ಷ ರೂ. ಮತ್ತು ಮೇಲೆ ಕೊಟ್ಟವರ ಹೆಸರಿನ ನಾಮಫಲಕವನ್ನು ಕಟ್ಟಡದ ಮುಂಭಾಗದಲ್ಲಿ ಹಾಕಲಾಗುವುದು. 11,000, 25,000, 50,000 ರೂ. ಕೊಟ್ಟವರ ಹೆಸರುಗಳನ್ನು ಸಾಮೂಹಿಕವಾಗಿ ಹಾನರ್(Honour) ಬೋರ್ಡಿನಲ್ಲಿ ಹಾಕ ಲಾಗುವುದು. ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್‌ಗೆ 80ಜಿ ಇನ್‌ಕಂ ಟ್ಯಾಕ್ಸ್ ರಿಯಾಯಿತಿ ಇದ್ದು ದಾನಿಗಳು ಇದರ ಸದುಪಯೋಗ ಪಡೆದುಕೊಳ್ಳಬಹುದು.

ಸಂಪರ್ಕಿಸುವ ವಿಳಾಸಗಳು

ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ
ಬಸವ ಗಂಗೋತ್ರಿ
ಬೆಂಗಳೂರು-ಮೈಸೂರು ಹೆದ್ದಾರಿ
ಕುಂಬಳಗೋಡು-560074
ಬೆಂಗಳೂರು ದಕ್ಷಿಣ ತಾಲ್ಲೋಕು
ಮೊ : 9448386717

ಪೂಜ್ಯಶ್ರೀ ಜಗದ್ಗುರು ಮಾತೆ ಮಹಾದೇವಿ
ವಿಶ್ವಕಲ್ಯಾಣ ಮಿಷನ್, ಬಸವ ಮಂಟಪ
2035, 20ನೆಯ ಮೇನ್
2ನೇ ಬ್ಲಾಕ್, ರಾಜಾಜಿನಗರ, ಕಾರ್ಡ್‌ರಸ್ತೆ
ಬೆಂಗಳೂರು-560010
ಮೊ : 23131476, 9448137508

ಶ್ರಾವಣ ಮಾಸ – ಬಸವ ಜ್ಯೋತಿ ಕಾರ್ಯಕ್ರಮ

ಶ್ರಾವಣ ಅಮವಾಸ್ಯೆ ದಿ.6-8-2013ರಂದು ಒದಗಿದೆ. ದಿ.7-8-2013ರಂದು ಶ್ರಾವಣ ಪ್ರತಿಪದೆ. ಅಂದಿನಿಂದ ಬಸವ ಜ್ಯೋತಿ ಕಾರ್ಯಕ್ರಮ ಆರಂಭವಾಗಬೇಕು. ಇಡೀ ತಿಂಗಳಿನ ಕಾರ್ಯಕ್ರಮ ರೂಪಿಸಲು ಎಲ್ಲ ಬಸವ ದಳಗಳು ಪ್ರಯತ್ನಿಸಬೇಕು. ಮಂಗಲ ಕಾರ್ಯಕ್ರಮ 9-9-2013ರಂದು.

ನೆನಪಿನ ಬುತ್ತಿ ಬಿಚ್ಚಿದಾಗ

(ಯಾವಾಗಲೋ ಬರೆದಿಟ್ಟ ವಿಷಯಗಳನ್ನು ಈಗ ಓದುಗರಿಗೆ ಕೊಡಲಾಗುತ್ತಿದೆ.)

– ಮಾತಾಜಿ

ಬಸವ ಪವಾಡ : ನಾಲ್ಕನೆಯ ಶರಣ ಮೇಳ ಅತ್ಯಂತ ಯಶಸ್ವಿಯಾಗಿ, ಹಿಂದಿನ ಶರಣ ಮೇಳಗಳನ್ನು ಮೀರಿಸಿದ್ದು ಒಂದು ವಿಶೇಷವಾದರೆ, ಎಲ್ಲರ ಗಮನಕ್ಕೂ ಬಂದ ಒಂದು ವಿಶೇಷ ಸಂಗತಿಯೆಂದರೆ, ಬಸವ ವಿರೋಧಿಗಳ ಸೊಲ್ಲು ಎಲ್ಲೆಲ್ಲೂ ಕೇಳಿಬರದುದು. ಹಿಂದಿನ ಮೂರೂ ಶರಣ ಮೇಳಗಳಲ್ಲಿ ಕಂಡ ಕಿರುಕುಳ ಈ ಸಲ ಇಲ್ಲದೆ ಬಹಳ ನೆಮ್ಮದಿಯಿಂದ ಇದ್ದವರೆಂದರೆ ಪೋಲೀಸು ಇಲಾಖೆಯವರು.

ಮೂರನೆಯ ಶರಣ ಮೇಳವು ಸಾಂಗವಾಗಿ ನೆರವೇರಿತ್ತು. ಸಮಾರೋಪ ಸಮಾರಂಭ ನಡೆಯುತ್ತಿತ್ತು. ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿಯವರು ಭಾವೋದ್ವಿಗ್ನತೆಯಿಂದ ಹೇಳಿದರು. "ಶರಣ ಮೇಳದ ಕಲ್ಪನೆಯನ್ನು ಹೊಂದಿ, ಕೂಡಲಸಂಗಮ ಕ್ಷೇತ್ರವನ್ನು ಸರ್ವಾಂಗೀಣವಾಗಿ ಬೆಳೆಸಬೇಕೆಂದು ನಾವು ಬರುತ್ತಲೇ ಈ ಕೆಲವರು (ಡಾ॥ ಜ.ಚ.ನಿ ಮತ್ತು ಹಿಂಬಾಲಕರು) ಎಷ್ಟು ರೀತಿ ಕಿರುಕುಳ ಕೊಡಲಾರಂಭಿಸಿದರಲ್ಲ. ಈ ಮೊದಲು ಇವರುಗಳಿಗೆ ವೀರಶೈವ ಸಮ್ಮೇಳನ ಮಾಡುವ ಆಲೋಚನೆ ಏಕೆ ಬರಬಾರದಾಗಿತ್ತು ? ನಾವು ಪ್ರಚಾರ ಮಾಡಿ ಜನರನ್ನು ಸೇರಿಸುತ್ತೇವೆ. ಇವರು ಬಂದು, ಉತ್ತರ ಕರ್ನಾಟಕದ ಭಾಷೆಯಲ್ಲಿ ಹೇಳುವಂತೆ 'ಎರೆದುಕೊಳ್ಳುವರ ಬುಡಕ್ಕೆ ಡೊಗ್ಗುವಂತೆ' ಬಂದು ಬಸವಾದಿ ಪ್ರಮಥರ ನಿಂದೆ ಮಾಡುತ್ತಾರೆ. ಬಸವಾದಿ ಪ್ರಮಥರನ್ನು ಕುರಿತು ಎಲ್ಲರ ಹೃದಯಗಳಲ್ಲಿ ನಾವು ಸುಂದರ ಚಿತ್ರ ಬಿಡಿಸುತ್ತೇವೆ. ಈ ಜನ ಅದಕ್ಕೆ ಮಸಿ ಚೆಲ್ಲುತ್ತಾರೆ. ಈ ಅನ್ಯಾಯವನ್ನು ತಡೆಗಟ್ಟಲು ಯಾರಿಗೂ ಆಗದೆ ?

ಇವರು ಇದೇ ರೀತಿ ಬಂದು ಕುಕಾರ್ಯಗಳನ್ನು ಮಾಡುವುದೇ ಆದರೆ, ನಾನು ಮುಂದಿನ ಶರಣ ಮೇಳಕ್ಕೆ ಬರುವುದಿಲ್ಲ. ನೀವೇ ಮಾಡಿಕೊಳ್ಳಿರಿ. ಇಲ್ಲ ಅವರ ಹೀನ ಚಟುವಟಿಕೆಗಳನ್ನು ನಿಲ್ಲಿಸಿರಿ'. ಎಂದು ಹೇಳಿ ಪೂಜ್ಯ ಅಪ್ಪಾಜಿ ಸಭೆಯಿಂದ ಹೊರಟರು.

ಶರಣ ಮೇಳದ ಜನರೂ ಜ.ಚ.ನಿಯವರ ಗುಂಪಿನ ಚಟುವಟಿಕೆಯಿಂದ ರೋಸಿ ಹೋಗಿದ್ದರು. ಪೂಜ್ಯ ಅಪ್ಪಾಜಿಯವರ ಮಾತು ಕೇಳಿ ಕೆಲವರ ಕಣ್ಣು ಹನಿಗೂಡಿದವು. ಶ್ರೀ.ಟಿ.ಎಸ್. ಕರಿಬಸವಯ್ಯನವರಂತೂ ಅತ್ತೇ ಬಿಟ್ಟರು. ಪೂಜ್ಯ ಅಪ್ಪಾಜಿಯವರನ್ನು ಹಿಂಬಾಲಿಸಿ ಮಠಕ್ಕೆ ಹೋಗಿ, "ಹೀಗೆ ಪ್ರತಿಜ್ಞೆ ಮಾಡಬೇಡಿ. ಕಾಡಿನಲ್ಲಿ ಕೋಗಿಲೆಗಳಿರುವಂತೆ ಕಾಗೆಗಳೂ ಇರುತ್ತವೆ. ನೀವು ಬರದಿದ್ದರೆ ಶರಣ ಮೇಳ ನಡೆಸಲಾದೀತೆ?" ಎಂದರು.

ನಾನಂತೂ ತುಂಬಾ ತಾಳ್ಮೆಯಿಂದ ಸಭೆಯನ್ನು ಮುಂದುವರಿಸಿದೆ. ಶರಣ ಮೇಳ ಉತ್ಸವ ಸಮಿತಿಯವರೆಲ್ಲ ದುಗುಡಗೊಂಡರು. ಅಪ್ಪಾಜಿ ಕೈಗೊಂಡ ಪ್ರತಿಜ್ಞೆಯನ್ನು ಸುಲಭವಾಗಿ ಬಿಡರು. ಯಾರನ್ನೇ ಆಗಲಿ ತಡೆಗಟ್ಟುವುದು ನಮ್ಮ ಕೈಲಿದೆಯೆ ? ಬೇಡ ಎಂದರೆ ಬಿಡುವಷ್ಟು ಆ ಜನರು ವಿವೇಕಿಗಳೇ? ಹೀಗೆಲ್ಲ ಚರ್ಚಿಸಿದೆವು. ಬಸವ ಧರ್ಮ ಸಂಸತ್ ಸದಸ್ಯರೂ ಚಿಂತನೆಯಲ್ಲೇ ಕಾಲ ಕಳೆದರು. ಪೂಜ್ಯ ಅಪ್ಪಾಜಿಯವರ ಪ್ರತಿಜ್ಞೆ ವಾಪಸ್ಸು ಪಡೆಯಲು ಏನು ಮಾಡಬೇಕು ಎಂದು ಆಲೋಚಿಸಿದೆವು.

ಆದರೆ ಅತ್ಯಾಶ್ಚರ್ಯಕರ ಘಟನೆ ನಡೆದುಬಿಟ್ಟವು. ಆ ಗುಂಪಿನಲ್ಲಿ ಮುಖಂಡರು ಎಂದರೆ ಡಾ॥ ಜ.ಚ.ನಿಯವರು. ಅವರ ಶಿಷ್ಯೋತ್ತಮ ಶಿವಾನಂದ ಸ್ವಾಮಿಯವರು, ಚಿತ್ರದುರ್ಗದ ಚನ್ನಬಸಪ್ಪ ಮತ್ತು ಹುನಗುಂದದ ನಿಂಗಪ್ಪ ಅಣ್ಣಿಗೇರಿಯವರು. ಮುಂದಿನ ಶರಣ ಮೇಳದಲ್ಲಿ ಇವರದು ಒಬ್ಬೊಬ್ಬರದು ಒಂದೊಂದು ಲೀಲೆ. ಚಿತ್ರದುರ್ಗದ ಚನ್ನಬಸಪ್ಪನವರು ಯಾವುದೋ ಶಸ್ತ್ರ ಚಿಕಿತ್ಸೆಗೆ ಒಳಗಾಗಿ, ಚೇತರಿಸಿಕೊಳ್ಳದೆ ತೀರಿಕೊಂಡರಂತೆ. ನಿಂಗಪ್ಪ ಅಣ್ಣಿಗೇರಿ (ವಯಸ್ಸು ಬಹಳವೇನಾಗಿರಲಿಲ್ಲ) ಹೃದಯಾಘಾತದಿಂದ ತೀರಿಕೊಂಡರು. ಜ.ಚ.ನಿಯವರು ಬಿದ್ದು ಪೆಟ್ಟಾಗಿ,

ಪ್ರಯಾಣ ಮಾಡಲಾರದಂತಾದರು. ಶಿವಾನಂದ ಸ್ವಾಮಿಯವರು ಯಾಕೋ ಸಮೀಪಕ್ಕೇ ಬರಲಿಲ್ಲ. ಮಾರ್ಗದರ್ಶಕ ಗುರುಗಳೂ ಇಲ್ಲ. ಹಿಂಬಾಲಕ ಅನುಯಾಯಿಗಳೂ ಇಲ್ಲದೆ ಏನು ಮಾಡಿಯಾರು? (ಒಂದಂತೂ ನಿಜ. ನಾವು ಎಂದೂ ಇವರಾರಿಗೂ ಕೆಟ್ಟದ್ದು ಬಯಸಿಲ್ಲ ಮತ್ತು ಅವರಿಗೆ ತೊಂದರೆಯಾಯಿತೆಂದು ಖಂಡಿತಾ ಸಂತೋಷಪಟ್ಟಿಲ್ಲ. ಅದು ತಾಮಸ ಬುದ್ಧಿ. ಇವರುಗಳು ಬಂದು ಕಿರುಕುಳ ಕೊಡದಿರಲಿ ಎಂದು ಗುರುಬಸವಣ್ಣನವರಲ್ಲಿ ಬೇಡಿಕೊಂಡೆವೇ ವಿನಾ ಅವರಿಗೆ ಕೆಟ್ಟದ್ದಾಗಲೀ ಎಂದಲ್ಲ.)

ಇದರಿಂದಾಗಿ ಗುರು ಬಸವಣ್ಣನವರು ನಮ್ಮನ್ನು ಒಂದು ಧರ್ಮ ಸಂಕಟದಿಂದ ಪಾರು ಮಾಡಿದರು. ಪೂಜ್ಯ ಗುರುಗಳನ್ನು ಬಿಟ್ಟು ಶರಣ ಮೇಳ ಮಾಡಲು ಯಾರಿಗೆ ಇಷ್ಟವಾದೀತು? ಮಾಡಿದರೆ ನಮ್ಮದು ಧಾರ್ಷ್ಟ್ಯವಲ್ಲವೆ ? ಆಗ ಗುರು ಬಸವಣ್ಣನವರ ಒಂದು ವಚನ ಅರ್ಥವಾಯಿತು.

ಲಿಂಗವಶದಿಂದ ಬಂದ ನಡೆಗಳು, ಲಿಂಗವಶದಿಂದ ಬಂದ ನುಡಿಗಳು
ಲಿಂಗವಂತರು ತಾವು ಅಂಜಲೇಕೆ!?
ಲಿಂಗವಿರಿಸಿದಂತೆ ಇಪ್ಪುದಲ್ಲದೆ
ಲಿಂಗದೇವ ಭಕ್ತರ ಅಭಿಮಾನ ತನ್ನದೆಂಬನಾಗಿ । ..ಬ.ವ.ದೀ 682

2. ಶರಣಾಗತ ರಕ್ಷಕ

ಒಂದು ದಿವಸ ಛಾಯಾ ಜಯರಾಜ್ ಅವರು ಕಾಣಿಕೆ ತೆಗೆದುಕೊಂಡು ಬಂದು (24-3-1991) ಒಂದು ವಿಶೇಷ ಪ್ರಸಂಗವನ್ನು ವಿವರಿಸಿದರು. ಶ್ರೀ ಜಯರಾಜ್ ವಕೀಲರು; ವಯಸ್ಸು ಚಿಕ್ಕದಿದ್ದರೂ ಪ್ರತಿಭಾವಂತರು, ಧೈರ್ಯಶಾಲಿಗಳು, ವಿಚಾರಶೀಲರು. ಅವರು ಒಂದು ಮೊಕದ್ದಮೆ ಹಿಡಿದಿದ್ದರಂತೆ. ಆಪಾದಿತ ನಿರಪರಾಧಿ ಇದ್ದು ಎದುರಾಳಿಗಳ ಧೂರ್ತ ಸಂಚಿನಿಂದಾಗಿ ಕಷ್ಟಕ್ಕೆ ಸಿಕ್ಕಿದ್ದನಂತೆ. ಆಪಾದಿತರು ಜೈನ ಧರ್ಮೀಯರು. ಮರುದಿವಸ ತೀರ್ಪು ಇದ್ದಿತಂತೆ. ಆತನ ವಿರುದ್ಧ ತೀರ್ಪಾದರೆ ಒಬ್ಬ ನಿರಪರಾಧಿಗೆ ಶಿಕ್ಷೆಯಾದಂತೆ ಎಂದು ಜಯರಾಜ್ ಅವರು ಕಳವಳಗೊಂಡಿದ್ದರಂತೆ. ರಾತ್ರಿಯೆಲ್ಲ ನಿದ್ದೆ ಮಾಡಲೂ ಆಗದೆ, ಚಟಪಟಿಸುತ್ತಿದ್ದರಂತೆ. ತೀರ್ಪು ವಿರುದ್ಧ ಆದರೆ ಏನು ಮಾಡಬೇಕು ಎಂದೆಲ್ಲ ಆಲೋಚಿಸ ತೊಡಗಿದ್ದರಂತೆ. ಜಯರಾಜ್ ಅವರು ನಿದ್ದೆ ಮಾಡದೆ ಚಟಪಟಿಸುವುದನ್ನು ಕಂಡು ಶ್ರೀಮತಿ ಛಾಯಾ ಅವರು ಕಾರಣ ಕೇಳಿದರಂತೆ, ವಕೀಲರು ವಿಷಯ ತಿಳಿಸಿದಾಗ, ಛಾಯಾ ಅವರಿಗೂ ಅಂತರಪ್ರೇರಣೆ ಉಂಟಾಯಿತಂತೆ. "ಗುರು ಬಸವಣ್ಣನವರು ಮಾತೃಹೃದಯಿ, ಸತ್ಯದ ಪರವಾಗಿ ಇರುವವರು, ನಿರಪರಾಧಿಗಳ ರಕ್ಷಕರು. ನಾನು ಅವರಲ್ಲಿ ಬೇಡಿಕೊಳ್ಳುತ್ತೇನೆ. ನೀವು ಗೆದ್ದರೆ 500 ರೂಪಾಯಿ ಕಾಣಿಕೆ ಕೊಡಬೇಕು, "ಎಂದು ಛಾಯಾ ಹೇಳಿದರಂತೆ. ಆಗ ಜಯರಾಜರು, 'ನಾನು ನಿನ್ನಷ್ಟು ಆಸ್ತಿಕನಲ್ಲ, ಆದರೆ ಗುರು ಕೃಪೆಯಿಂದ ಒಬ್ಬ ನಿರಪರಾಧಿ ಉಳಿಯುತ್ತಿದ್ದರೆ ಉಳಿಯಲಿ. ಆತ ಜೈನ ಧರ್ಮೀಯ; ಕೊಟ್ಟರೆ ಕೊಡಲಿ. ಇಲ್ಲವಾದರೆ ನಾನು ಅವರ ಪರವಾಗಿ ಕೊಡುವೆ' ಎಂದರಂತೆ. ಛಾಯಾ ಅವರು ಅಂತಃಕರಣಪೂರ್ವಕವಾಗಿ ಪ್ರಾರ್ಥಿಸಿದರಂತೆ. ವಕೀಲರು ತಮ್ಮ ಕಾಯಕಕ್ಕೆ ಹೊರಟರು. ಮನಸ್ಸು ಅದೇ ಆತಂಕದಿಂದ ಹೊಯ್ದಾಡುತ್ತಿತ್ತಂತೆ. ಸರಿ, ಇವರ ಕಕ್ಷಿದಾರರ ಸಮಯ ಬಂದಾಗ ನ್ಯಾಯಾಧೀಶರು (ಅವರು ಬಹಳ ನಿಷ್ಠುರ ವ್ಯಕ್ತಿಗಳಂತೆ). ಎಲ್ಲರನ್ನೂ ಒಮ್ಮೆ ನೋಡಿ, "ಆರೋಪದಿಂದ ಬಿಡುಗಡೆ ಆಗಿದೆ." ಎಂದು ಹೇಳಿದರಂತೆ. ಆಗ ಇವರೆಲ್ಲರಿಗೂ ಆಶ್ಚರ್ಯ ಆನಂದ. ಆತನಂತೂ ಸಂತೋಷಾತಿರೇಕದಿಂದ ಕಣ್ಣೀರು ಸುರಿಸಿದನಂತೆ. ನಂತರ ವಕೀಲರು ಎಲ್ಲ ವಿವರಿಸಿ, "ನನ್ನ ಪತ್ನಿ ಈ ರೀತಿ ಪ್ರಾರ್ಥಿಸಿದ್ದಾಳೆ. ಆದ್ದರಿಂದ ಆ ಹರಕೆ ಪೂರೈಸಬೇಕು. ನಿಮಗೆ ಒತ್ತಾಯವಿಲ್ಲ. ನಿಮ್ಮನ್ನು ರಕ್ಷಿಸಲು ಸ್ವಯಂ ಇಚ್ಛೆಯಿಂದ ಸಂಕಲ್ಪ ಮಾಡಿದ್ದೇವೆ. ನೀವು ಕೊಡದಿದ್ದರೆ ನಾನು ಕೊಡುವೆ. ಎನ್ನುತ್ತಲೇ ಆತ ಸ್ವಯಂ ಸಂತೋಷದಿಂದ

ಕಾಣಿಕೆ ಕೊಟ್ಟು ಕಳಿಸಿದ್ದ. ಅದನ್ನು ಛಾಯಾ-ಜಯರಾಜ್ ದಂಪತಿಗಳು ಅವರ ಕಕ್ಷಿದಾರರ ಹೆಸರಲ್ಲೇ ತಂದುಕೊಟ್ಟರು.

ಈ ಪ್ರಸಂಗ ಎರಡು ತತ್ತ್ವಗಳನ್ನು ಪ್ರತಿನಿಧಿಸುತ್ತದೆ. 1. ನಿಷ್ಕಲ್ಮಶ ಮನಸ್ಸು, ಪರಿಶುದ್ಧಾಂತಃಕರಣದಿಂದ ಮಾಡುವ ಪ್ರಾರ್ಥನೆ ಖಂಡಿತಾ ಫಲಕೊಡುತ್ತದೆ. 2.ಗುರು ಬಸವಣ್ಣನವರು ನಿರಪರಾಧಿಗಳ ರಕ್ಷಕರು, ಶರಣಾಗತ ಪೋಷಕರು.

ನಂಬಿದವರಿಗೆ ಇಂಬು ನೀನೆ ಬಸವಲಿಂಗ
ನಂಬಿಗಿಲ್ಲದವರ ಎದೆಯೋಳಂಬು ನೀನೆ ಬಸವಲಿಂಗ

ಎಂಬ ಕವಿವಾಣಿಯು ಪರಮ ಸತ್ಯ ಎನ್ನುವುದನ್ನು ಈ ಎರಡೂ ಪ್ರಸಂಗಗಳು ಚಿತ್ರಿಸುತ್ತವೆ.

ಸಮಸ್ಯೆ?-ಸಮಾಧಾನ!

- ನಾನು ಸ್ನಾತಕೋತ್ತರ ಪದವೀಧರೆ, ಲಿಂಗಾಯತ ಧರ್ಮಾನುಯಾಯಿ. ಇನ್ನೂ ಮುಂದುವರಿದು ಹೇಳಬೇಕೆಂದರೆ ತಮ್ಮ ಅನುಯಾಯಿ, ಬಸವ ಧರ್ಮವನ್ನು ಪೂರ್ಣವಾಗಿ ಅನುಸರಿಸುವವಳು. ವಿಶ್ವವಿದ್ಯಾಲಯಕ್ಕೆ ಬಸ್ಸಿನಲ್ಲಿ ಹೋಗುವಾಗ ಒಬ್ಬ ಹುಡುಗನ ಪರಿಚಯವಾಯಿತು. ಪರಿಚಯ ಪ್ರೇಮಕ್ಕೆ ತಿರುಗಿದೆ. ಆತ ಕೆಳಜಾತಿಯವನು; ಅವರ ತಾಯಿತಂದೆ ಒಪ್ಪಬಹುದು. ಆದರೆ ನನ್ನ ತಾಯಿತಂದೆ ಖಂಡಿತಾ ಒಪ್ಪುವುದಿಲ್ಲ. ಅವರನ್ನು ತೊರೆದು, ನೋಯಿಸಿ ಮದುವೆಯಾಗುವ ಧೈರ್ಯವೂ ನನಗೆ ಇಲ್ಲ. ಈಗ ನಾನೇನು ಮಾಡಲಿ?

■ ಹಾವೂ ಸಾಯಲಿಲ್ಲ, ಕೋಲೂ ಮುರಿಯಲಿಲ್ಲ ಎಂಬಂತಿದೆ ನಿನ್ನ ಸಮಸ್ಯೆ. ಯಾವುದಾದರೂ ಒಂದು ನಿರ್ಧಾರಕ್ಕೆ ಬರಬೇಕು. ಗುರು ಬಸವಣ್ಣನವರ ವಿಚಾರಧಾರೆ ಪ್ರಕಾರ ಈ ಮದುವೆ ಏನು ತಪ್ಪಲ್ಲ. 12ನೆಯ ಶತಮಾನದಲ್ಲೇ ಹರಳಯ್ಯನವರ ಮಗ ಮಧುವರಸರ ಮಗಳ ಮಧ್ಯೆ ವಿವಾಹ ನಡೆಸಿದ್ದಾರೆ.

ಆದರೆ...... ಜೀವನಕ್ಕೆ ಕೇವಲ ಗಂಡ-ಹೆಂಡತಿಯ ನಡುವಿನ ಪ್ರೀತಿಯಷ್ಟೆ ಸಾಲದು. ವೈವಾಹಿಕ ಜೀವನದ ಸುತ್ತ ಸಾಂಸ್ಕೃತಿಕ ಸಂಬಂಧಗಳೂ ಇರುತ್ತವೆ. ಇಂಥಾ ವಿವಾಹಗಳಾದಾಗ ತಾಯಿ ತಂದೆಯರ ಸಂಬಂಧ ಹರಿದು ಹೋಗಿ ಗಂಡ ಎಷ್ಟೇ ಧೈರ್ಯ ಹೇಳಿದರೂ ಹೆಂಡತಿ "ನಾನು ತಾಯಿ-ತಂದೆಯರ ಪ್ರೀತಿಯಿಂದ ವಂಚಿತಳಾದೆ" ಎಂದು ಮಾನಸಿಕ ಖಿನ್ನತೆ ಯಿಂದ ಬಳಸುವ ಸಾಧ್ಯತೆ ಇದೆ. ಶಾಕಾಹಾರಿ ಸಮಾಜದಲ್ಲಿ ಹುಟ್ಟಿ ಬೆಳೆದ ಸಂಸ್ಕಾರ ಇರುವವರು ಮಾಂಸಾಹಾರಿಗಳ ಜೊತೆ ಹೊಂದಿಕೊಳ್ಳಲು ಬಹಳ ಪ್ರಯಾಸಪಡಬೇಕಾಗುತ್ತದೆ. ತನ್ನ ಬಂಧು ಬಳಗವನ್ನು ಕಳೆದುಕೊಂಡು ಒಂಟಿತನವನ್ನು ಕೆಲವರು ಅನುಭವಿಸುತ್ತಾರೆ.

ಆದ್ದರಿಂದ, ನಿಮ್ಮ ತಾಯಿತಂದೆಯವರನ್ನು ಒಪ್ಪಿಸಲು ಯತ್ನಿಸು. ಅವರು ಒಪ್ಪದೆ ಇದ್ದರೆ ಅವರನ್ನು ಸಾಮಾಜಿಕ ಮುಜುಗರಕ್ಕೆ ಈಡು ಮಾಡಬಾರದೆಂದಿದ್ದರೆ ಅವರು ಇಷ್ಟಪಡುವ ಹುಡುಗನನ್ನು ನೀನು ಒಪ್ಪಿಕೊಂಡು ಮದುವೆಯಾಗು. ನಿನ್ನ-ಆ ಹುಡುಗನ ಸಂಬಂಧ ದೀರ್ಘಕ್ಕೆ ಹೋಗಿದ್ದರೆ ಧೈರ್ಯವಾಗಿ ಮದುವೆಯಾಗು. ಇನ್ನೂ ಬಸ್ಸಿನಲ್ಲಿ ಸಂಚರಿಸುವ ಮಟ್ಟದಲ್ಲಿ ಇದ್ದರೆ ಅವನನ್ನು ಮರೆತು ತಾಯಿತಂದೆ ಒಪ್ಪುವ ಹುಡುಗನನ್ನು ಮದುವೆಯಾಗು.

ಬಸವ ಪಂಚಮಿ (818ನೆಯ ಲಿಂಗೈಕ್ಯ ಸಂಸ್ಮರಣೆ)ಯ ವಿಶೇಷ ಕಾರ್ಯಕ್ರಮವನ್ನು ಬೆಂಗಳೂರಿನ ಸಿಟಿ ಮಾರುಕಟ್ಟೆ ಪ್ರದೇಶದಲ್ಲಿರುವ ಸರ್.ಕೆ.ಪಿ.ಪುಟ್ಟಣ್ಣಶೆಟ್ಟಿ ಹಾಲ್‌ದಲ್ಲಿ ಶಿವ(ಸೋಮ)ವಾರ ದಿ.12-8-2013ರಂದು ಬೆಳಿಗ್ಗೆ 10-30ಕ್ಕೆ ಏರ್ಪಡಿಸಲಾಗಿದೆ. ನೀಲಾಂಬಿಕಾ ಷಷ್ಠಿಯನ್ನು ಬಸವ (ಮಂಗಳ)ವಾರ ದಿ.13-8-2013ರಂದು ಬೆಳಿಗ್ಗೆ 10-30ಕ್ಕೆ ರಾಜಾಜಿನಗರದ 2ನೇ ಬ್ಲಾಕ್ 20ನೆಯ ಮುಖ್ಯ ರಸ್ತೆಯಲ್ಲಿರುವ ಬಸವ ಮಂಟಪದಲ್ಲಿ ಸಾಮೂಹಿಕ ಇಷ್ಟಲಿಂಗ ಪೂಜೆಯೊಡನೆ ನಡೆಸಲಾಗುವುದು.

ಆಡುವೆ, ಹಾಡುವೆನಯ್ಯಾ

- ಶಿರೀಷ ಜೋಷಿ

ಶರಣ ಚಳುವಳಿಯ ಅಪೂರ್ವ ಘಟನೆಗಳ ಗುಚ್ಛ ಹನ್ನೆರಡನೆಯ ಶತಮಾನ. ಸಮಾಜದ ಜೊತೆ ಜೊತೆಗೆ ಧರ್ಮದ ಕಣ್ಣು ತೆರೆದುಕೊಂಡ ಕಾಲವದು. ಆಂದೋಲನ ಅಂದಿನ ಸಾಂಸ್ಕೃತಿಕ ವಲಯವನ್ನೂ ಒಳಗೊಂಡು ಬೆಳೆದದ್ದು ವಿಶೇಷ. ಬಸವಾದಿ ಪ್ರಮಥರು ಪಾಲ್ಗೊಂಡಿದ್ದ ಚಳುವಳಿಯಲ್ಲಿ ಹಲವು ಸಂಗೀತಗಾರರೂ ಇದ್ದರು. ಸಕಲೇಶ ಮಾದರಸ, ಅಲ್ಲಮಪ್ರಭು, ಕಿನ್ನರಿ ಬೊಮ್ಮಯ್ಯ, ಢಕ್ಕೆಯ ಮಾರಯ್ಯ-ಹೀಗೆ ಆ ಕಾಲದ ವಚನ ಸಂಗೀತಕಾರರ ಪಟ್ಟಿ ಬೆಳೆಯುತ್ತದೆ.

ಬಸವಣ್ಣ ಕೂಡ ಸಂಗೀತಗಾರರಾಗಿದ್ದರು ಎಂಬುದು ಅನೇಕರಿಗೆ ಗೊತ್ತಿಲ್ಲ. ತಾವೊಬ್ಬ ಸಂಗೀತಗಾರ ಎಂದು ಅವರೂ ಹೇಳಿಕೊಂಡಿಲ್ಲ. ಆದರೆ ಅವರ ಸಮಕಾಲೀನರು ರಚಿಸಿದ ವಚನಗಳಲ್ಲಿ ಈ ಬಗ್ಗೆ ಉಲ್ಲೇಖವಿದೆ.

ಬಸವಣ್ಣ ಸಂಗೀತ ಬಲ್ಲವರಾಗಿದ್ದರು ಎಂಬುದನ್ನು ಹರಿಹರ ಸೊಗಸಾಗಿ ವರ್ಣಿಸುತ್ತಾನೆ. ತನ್ನ ಬಸವರಾಜ ದೇವರ ರಗಳೆಯಲ್ಲಿ 'ನೆನೆನೆನೆದು ಪುಳಕಿಸುತೆ ಗೀತವಂ ಪಾಡುತಂ' ಎಂದು ಬಸವಣ್ಣನವರು ಹಾಡಿನ ಮೂಲಕ ಶಿವಪೂಜೆ ಮಾಡುತ್ತಿದ್ದುದಾಗಿ ವರ್ಣಿಸಿದ್ದಾನೆ. ಆಗ ಅವರು ಅನೇಕ ರಾಗಗಳನ್ನು ಹಾಡುತ್ತಿದ್ದರೆಂದು ವಿವರಿಸಿದ್ದಾನೆ. ಆ ರಗಳೆಯ ಕೆಲವು ಸಾಲುಗಳನ್ನು ಗಮನಿಸಿ, '...ಲಲಿತ ಬಂಗಾಳದಿಂದೊಲಿದು ನಿಮ್ಮಂ ಹಾಡಿ, ದೇಶಿ ಗುರ್ಜ್ಜರಿಗಳಿಂದೀಶ ನಿಮ್ಮಂ ಹಾಡಿ, ದೇಶಾಕ್ಷಿಗೌಳದೆ ಮಹೇಶ ನಿಮ್ಮಂ ಹಾಡಿ....' ಇಲ್ಲಿ ಲಲಿತ, ಬಂಗಾಳ, ದೇಶಿ ಮೊದಲಾದ ರಾಗಗಳು ಇಂದಿಗೂ ಕರ್ನಾಟಕಿ ಸಂಗೀತದಲ್ಲಿ ಬಳಕೆಯಲ್ಲಿವೆ. ಪಾಲ್ಕುರಿಕೆ ಸೋಮನಾಥನು ಬಸವಣ್ಣನವರನ್ನು 'ಕವಿ ಪಂಡಿತ ಗಾಯಕ ಚಕ್ರವರ್ತಿ' ಎಂದಿದ್ದಾನೆ. ಅವರು ಗಾಯನವನ್ನೂ ಪ್ರೀತಿಸುತ್ತಿದ್ದರು ಎಂಬುದಕ್ಕೆ ಅನೇಕ ವಚನಗಳಲ್ಲಿ ಬರುವ 'ಹಾಡುವೆ' ಎಂಬ ಪದ ಉಪಾಧಿ ಅವರ ಸಂಗೀತಜ್ಞಾನಕ್ಕೂ ಅನ್ವಯ. ಬಸವಣ್ಣನವರ ಹಲವು ವಚನಗಳೇ ಅವರೊಳಗೊಬ್ಬ ನಾದಲೋಲ ಇದ್ದನೆಂಬುದರ ಪ್ರತೀಕ.

ನಾಲಗೆ ದಣಿಯದು...

'ಕಿಂಚಿತ್ ಗೀತವೊಂದು ಅನಂತಕೋಟಿ ಜಪಕ್ಕೆ ಸಮಾನ' ಎಂಬ ವಚನದ ಸಾಲು ಸಂಗೀತ ಸೃಜಿಸುವ ಆನಂದದ ಪ್ರತಿಪಾದಕ. ಭಕ್ತಿಯ ಅಭಿವ್ಯಕ್ತಿಗೆ ಶ್ರೇಷ್ಠ ಮಾಧ್ಯಮ ಸಂಗೀತ ಎಂಬುದು ಬಸವಣ್ಣನವರ ಅರಿವಿಗೆ ನಿಲುಕಿದ ಸತ್ಯ. 'ಹಾಡಿ ನಾಲಗೆ ದಣಿಯದು' ಎಂದು ಹೇಳುವ ಉದ್ದೇಶವೂ ಅದೇ. 'ರಾಗ ರಂಜನೆಯ ಉತ್ಪತ್ತಿ ಸ್ಥಿತಿಲಯ ನಿನಗೆಂದಾದುವು. ರಾಗರಂಜನೆಯ ಪೂಜೆ ಎನ್ನ ಮನ' ಎನ್ನುವಲ್ಲಿ ಸಂಗೀತದ ಮೂಲಕ ಶಿವಪೂಜೆ ಸಾಧ್ಯ ಎಂಬ ಭಾವವಿದೆ. 'ಆನಂದದಿಂದ ಆಡುವೆ ಹಾಡುವೆನಯ್ಯಾ... ಎನ್ನ ಮನವೊಲಿದು ಭಕ್ತಿಯ ಮಾಡುವೆ' ಎಂದು ಕೂಡಲಸಂಗಮನಲ್ಲಿ ಅನುರಕ್ತರಾಗುತ್ತಾರೆ.

ಕೆಲವು ವಚನಗಳಲ್ಲಿ ಬಸವಣ್ಣನವರು ಸಂಗೀತಶಾಸ್ತ್ರವನ್ನು ಬಹು ಸೂಕ್ಷ್ಮವಾಗಿ ಉಲ್ಲೇಖಿಸುತ್ತಾರೆ. 'ತಾಳ ಮಾನ ಸರಿಸವನರಿಯೆ' ಎಂಬ ಸಾಲು ಸಂಗೀತಶಾಸ್ತ್ರದ ದೃಷ್ಟಿಯಿಂದ ಮಹತ್ವದ್ದು. ತಾಳಕ್ಕೆ ತಕ್ಕಂತೆ ಹಾಡುವ ಮತ್ತು ಅದರಲ್ಲಿ ಲಯ ಚಮತ್ಕಾರ ತೋರುವ ಹಾಡುಗಾರಿಕೆಯನ್ನು ಈ ವಚನ ವಿವರಿಸುತ್ತದೆ. ಇದು ಒಬ್ಬ ಪ್ರಬುದ್ಧ ಸಂಗೀತಗಾರನಿಗಷ್ಟೆ ಸಾಧ್ಯವಾಗುವ ಶೈಲಿ. ಕರ್ನಾಟಕಿ ಮತ್ತು ಹಿಂದುಸ್ತಾನಿ ಸಂಗೀತಗಳೆರಡರಲ್ಲಿಯೂ ಲಯದೊಂದಿಗೆ ಸರಸವಾಡುತ್ತ ಹಾಡಿಗೆ ರಂಗು ತುಂಬುವವರು ಈಗಲೂ ವಿರಳ. ಅಂಥ ವಿರಳ ಸಂಗೀತವನ್ನು 'ನಾನರಿಯೆ' ಎನ್ನುವಲ್ಲಿ ಅವರಿಗಿರುವ ಸಂಗೀತ ಜ್ಞಾನ ಅಭಿವ್ಯಕ್ತವಾಗುತ್ತದೆ. 'ಓಜೆ ಬಜಾವಣೆಯ ಲೆಕ್ಕವನರಿಯೆ' ಎಂಬುದು ಇದೇ ವಚನದ ಇನ್ನೊಂದು ಸಾಲು. ದೇಗುಲಗಳಲ್ಲಿ ನುಡಿಸುವ

ಮಂಗಳವಾದ್ಯಗಳನ್ನು ಸೂಕ್ಷ್ಮವಾಗಿ ಕೇಳಿದರೆ, ವಾದ್ಯಗಳ ಬಜಾವಣೆ (ನುಡಿಸುವಿಕೆ) ಎಷ್ಟೊಂದು ಕಾಲಬದ್ಧ ಎಂಬುದರ ಅರಿವಾಗುತ್ತದೆ. ಕಾಲಖಂಡದಲ್ಲಿ ಮಾತ್ರೆಗಳನ್ನು ವಿಂಗಡಿಸಿಕೊಂಡು ವಾದ್ಯಗಳನ್ನು ನುಡಿಸುವುದು ವಾದ್ಯಕಾರನ ಲೆಕ್ಕಾಚಾರ ಮತ್ತು ಜಾಣ್ಮೆಯನ್ನು ಅವಲಂಬಿಸಿರುತ್ತದೆ. ಈ ಕ್ರಿಯೆಯನ್ನು ಬಸವಣ್ಣನವರು ತಮ್ಮ ವಚನದಲ್ಲಿ ದಾಖಲಿಸುತ್ತಾರೆ.

ಒಂದು ವಚನದಲ್ಲಿ ಬಸವಣ್ಣನವರು ಅರವತ್ನಾಲ್ಕು ವಿದ್ಯೆಗಳನ್ನು ಪಟ್ಟಿಮಾಡುತ್ತಾರೆ. ಈ ವಚನದಲ್ಲಿಯ ಗಾಂಧರ್ವವಿದ್ಯೆ, ವೀಣಾವಿದ್ಯೆ ಮತ್ತು ಭರತವಿದ್ಯೆಗಳು ಸಂಗೀತಕ್ಕೆ ಸಂಬಂಧಿಸಿದವು. 'ಚೌಷಷ್ಟಿ'ವಿದ್ಯೆಗಳನ್ನು ಕಲಿತವನೆಂದೆನಿಕೊಳ್ಳುವನಲ್ಲದೆ ಲಿಂಗಭಕ್ತನೆನಿಸಿಕೊಳ್ಳುವುದಿಲ್ಲ' ಎಂಬ ಸಾಲು ಸಂಗೀತದ ಮಹತ್ವವನ್ನು ಸಾರುತ್ತದೆ. ಅಷ್ಟೇ ಅಲ್ಲ ಅವರು 'ಆನು ಒಲಿದಂತೆ ಹಾಡುವೆನಯ್ಯ' ಎನ್ನುತ್ತ ನಾದದ, ಸಾಹಿತ್ಯದ, ಜೊತೆಗೆ ಲೌಕಿಕದ ಕಟ್ಟುಗಳನ್ನು ಮೀರಿದವರು.

ಕಾಯವ ದಂಡಿಗೆಯ ಮಾಡಯ್ಯ.

ಬಸವಣ್ಣನವರ ವಚನಗಳಲ್ಲಿ ಅನೇಕ ವಾದ್ಯಗಳ ಬಿಂಬವಿದೆ. ಇವುಗಳಿಂದ ಆ ಕಾಲದ ವಾದ್ಯಗಳು ಮತ್ತು ಅವುಗಳ ಬಳಕೆ ಬಗ್ಗೆ ಸ್ಪಷ್ಟ ಚಿತ್ರಣ ದೊರೆಯುತ್ತದೆ. 'ಟೀವಕ ಟಿಂಬಕನಾಡಿಸುತ್ತಿದ್ದಿತಯ್ಯ' ಎಂಬ ವಚನದ 'ಟೀವಕ' ವಾದ್ಯವು ಇಂದಿನ 'ಏಕತಾರಿ' ಏಕತಂತ್ರಿ ವೀಣಾ ಎಂಬುದರ ಅಪಭ್ರಂಶ ರೂಪವೇ 'ಏಕತಾರಿ'. ಏಕತಾರಿ 'ಟಿಂವ್ ಟಿಂವ್' ಎಂದು ನಾದಹೊರಡಿಸುವ ಕಾರಣವಾಗಿ 'ಟೀವಕ್ಕಿ' ಎಂದೂ ಹಳ್ಳಿಗರು ಕರೆಯುವುದುಂಟು. (ಟೀವಕ್ಕಿ ಎಂಬುದು ಪಕ್ಷಿಯ ಹೆಸರೂ ಹೌದು.) 'ಆಡಿದಡೇನು ಹಾಡಿದಡೇನು.... ಆಡದೇ ನವಿಲು ಹಾಡದೇ ತಂತಿ' ಎಂಬುದನ್ನು ಇಲ್ಲಿ ಗಮನಿಸಬೇಕು. ಹನ್ನೆರಡನೆಯ ಶತಮಾನದ ವೀಣೆಯಂಥ ತಂತುವಾದ್ಯದ ಚಿತ್ರಣ ಇಲ್ಲಿದೆ. ಕರ್ನಾಟಕಿ ಸಂಗೀತದ ಅನೇಕ ಕೃತಿಗಳಿಗೆ ಈಗಲೂ ವೀಣೆಯು ಆಧಾರ ಅಲ್ಲದೆ ಆ ಕಾಲದಲ್ಲಿ ವೀಣೆಯೊಂದಿಗೆ ಸಹಗಾಯನ ಮಾಡುತ್ತಿದ್ದುದನ್ನು ಇದು ದಾಖಲಿಸುತ್ತದೆ.

'ಎನ್ನ ಕಾಯವ ದಂಡಿಗೆಯ ಮಾಡಯ್ಯ' ಎಂಬ ವಚನದ ಸಾಲಿನಲ್ಲಿ ಒಂದು ವಾದ್ಯದ ಸ್ಪಷ್ಟರೂಪ ವ್ಯಕ್ತವಾಗುತ್ತದೆ. ಮನುಷ್ಯನ ದೇಹವನ್ನು ವಾದ್ಯದೊಂದಿಗೆ ಸಮೀಕರಿಸಿ, ಇಡೀ ದೇಹವನ್ನೇ ಸಂಗೀತಮಯಗೊಳಿಸುವ ಅಪರೂಪದ ರೂಪಕ ಇದು. ತಮ್ಮ ದೇಹದ ಪ್ರತಿಯೊಂದು ಅಂಗವೂ ಸಂಗೀತದ ವಾದ್ಯವೊಂದರ ಭಾಗವಾಗುವ ಮತ್ತು ಆ ಮೂಲಕ ನಾದಮಯವಾಗುವ ಆಶಯವನ್ನು ಬಸವಣ್ಣ ಅಭಿವ್ಯಕ್ತಿಸಿದ್ದಾರೆ. ಕಾಯ ದಂಡಿಗೆಯಾಗಿ, ಶಿರವು ಸೋರೆಯಾಗಿ ನರಗಳು ತಂತಿಯಾಗಿ, ಬೆರಳುಗಳು ಕಡ್ಡಿಯಾಗಿ ಮಾರ್ಪಟ್ಟ ಆ ತಂತಿವಾದ್ಯವನ್ನು (ಬಹುಶಃ ವೀಣೆ) ಉರದಲೊತ್ತಿ ಬಾರಿಸುವಂತೆ ಕೂಡಲಸಂಗಮನಲ್ಲಿ ಪ್ರಾರ್ಥಿಸುತ್ತಾರೆ. ಶಿವನು ಪಾರ್ವತಿಯ ಅಂಗಸೌಷ್ಟವವನ್ನು ಆಧರಿಸಿ ವೀಣೆಯನ್ನು ರೂಪಿಸಿದಂತೆ ! ಬಸವಣ್ಣನವರ ದಂಡಿಗೆ 'ಶರಣಸತಿ-ಲಿಂಗಪತಿ'ಯ ದ್ಯೋತಕ. ದೇಹವನ್ನು ವೀಣೆಗೆ ಸಮೀಕರಿಸಿಕೊಳ್ಳುವ ವಿಚಾರ ಹದಿಮೂರನೇ ಶತಮಾನದ ಸಂಗೀತಶಾಸ್ತ್ರಕಾರ ಶಾಂರ್ಙ್ಗದೇವನ ಸಂಗೀತ 'ರತ್ನಾಕರ'ದಲ್ಲಿಯೂ ವ್ಯಕ್ತವಾಗಿದೆ. ಪ್ರಾಚೀನಕಾಲದಲ್ಲಿ ವೀಣೆಯನ್ನು ಕಡ್ಡಿಗಳ ಸಹಾಯದಿಂದ ನುಡಿಸುವುದು ರೂಢಿಯಲ್ಲಿತ್ತು. ಮಹಿಳೆಯೊಬ್ಬಳು ವೀಣೆಯನ್ನು ಕಡ್ಡಿಯಿಂದ ನುಡಿಸುತ್ತಿರುವ ಮೂರ್ತಿಯೊಂದು ಸಾಂಚಿಯಲ್ಲಿದೆ.

ಈ ವಚನದಲ್ಲಿ ಬರುವ 'ಬತ್ತೀಸ ರಾಗಗಳ' ಉಲ್ಲೇಖವೂ ಸಂಗೀತ ಶಾಸ್ತ್ರದ ದೃಷ್ಟಿಯಿಂದ ಮುಖ್ಯ. ಬತ್ತೀಸ (ಮೂವತ್ತೆರಡು) ರಾಗಗಳು ಬಹುಶಃ ಭಾರತೀಯ ಸಂಗೀತದ ಮೂಲ ರಾಗಗಳು. ನಾರದನು ತನ್ನ ಸಂಗೀತ ಮಕರಂದದಲ್ಲಿ (8ನೆಯ ಶತಮಾನ) ರಾಗಗಳಲ್ಲಿ ಎರಡು ವಿಭಾಗಗಳನ್ನಾಗಿ ಮಾಡಿ ಮೊದಲಭಾಗದಲ್ಲಿ ಎಂಟು ಮುಖ್ಯ ರಾಗಗಳನ್ನೂ ಇಪ್ಪತ್ನಾಲ್ಕು

ಚಿಕ್ಕರಾಗಗಳನ್ನೂ ಗುರುತಿಸಿದ್ದಾನೆ. ಇವು ಒಟ್ಟು ಮೂವತ್ತೆರಡು ರಾಗಗಳು. ಎರಡನೆಯ ಭಾಗದಲ್ಲಿ ಈತ ಒಟ್ಟು ನಲವತ್ತೆರಡು ರಾಗಗಳನ್ನು ಉಲ್ಲೇಖಿಸುತ್ತಾನೆ. ಮೊದಲಭಾಗದ ಮೂವತ್ತೆರಡು ರಾಗಗಳಿಗೆ ಪ್ರಾಮುಖ್ಯತೆ ಇದ್ದಿರಬಹುದು. ಇವುಗಳನ್ನು ಬಸವಣ್ಣನವರು 'ಬತ್ತೀಸ' ರಾಗಗಳೆಂದು ಹೇಳಿರಬಹುದು.

ನಾದಪ್ರಿಯ ಶಿವನಲ್ಲ..

ಹಾಡಿಗಿಂತಲೂ ಭಕ್ತಿಯೇ ಮುಖ್ಯವಾಗಿದ್ದರೂ ಬಸವಣ್ಣ ಸಂಗೀತವನ್ನು ಬಿಟ್ಟುಕೊಡಲಿಲ್ಲ. 'ಆಡುತ್ತ ಹಾಡುತ್ತ ಭಕ್ತಿಯ ಮಾಡಬಹುದು ಲಿಂಗಕ್ಕೆ' ಎನ್ನುವುದು ಭಕ್ತಿಯ ಅಭಿವ್ಯಕ್ತಿಗೆ ಸಂಗೀತ ಸಾಧನವಾಗಿತ್ತು ಎಂಬುದನ್ನು ನೆನಪಿಸುತ್ತದೆ. 'ಅರಿವನ್ನಕ್ಕರ ಹಾಡಿ ಹೊಗಳುವೆ' ಎನ್ನುವಾಗಲೂ 'ಹಾಡಿದೊಡೆ ಎನ್ನೊಡೆಯನ ಹಾಡುವೆ' ಎನ್ನುವಾಗಲೂ ಇದೇ ಭಾವ ಹೊಮ್ಮುತ್ತದೆ.

ಇಷ್ಟಾದರೂ ಬಸವಣ್ಣನವರಿಗೆ ರಾಗಗಳ ಬಂಧನವಿರಲಿಲ್ಲ. ಧರ್ಮದ ಚೌಕಟ್ಟನ್ನು ದಾಟಿದಂತೆ ಸಂಗೀತಶಾಸ್ತ್ರದ ಚೌಕಟ್ಟನ್ನೂ ಅವರು ಮೀರಿದ್ದರು. ಗೀತವಾಗದೆಯೂ ಭಕ್ತಿ ತಲುಪಬಲ್ಲದು ಎಂಬ ದೃಷ್ಟಿ ಅವರದಾಗಿತ್ತು. 'ಗೀತವ ಬಲ್ಲಾತ ಜಾಣನಲ್ಲ, ಮಾತ ಬಲ್ಲಾತ ಜಾಣನಲ್ಲ' ವಚನವನ್ನು ಗಮನಿಸಿ, ಗೀತ ಬಲ್ಲಾತ ಎಂದರೆ ಸಂಗೀತ ಬಲ್ಲವನು ಎಂದರ್ಥ. ಇಲ್ಲಿನ 'ಗೀತ' ಎಂಬ ಶಬ್ದ ಪ್ರಯೋಗ ಸಂಗೀತದ ದೃಷ್ಟಿಯಿಂದ ಮುಖ್ಯ. ಇದಕ್ಕೆ ಪೂರಕವಾಗಿ ಬಸವಣ್ಣನವರ 'ಗೀತವ ಹಾಡಿದೊಡೇನು' ಎಂಬುದನ್ನೂ ಗಮನಿಸಬಹುದು. ಈ ಎಲ್ಲ ಪ್ರಯೋಗಗಳು 'ಗೀತ' ಎಂಬುದು ಹಾಡುವ ಪ್ರಕಾರ ಎನ್ನುತ್ತದೆ. 'ಗೀತೆ' ಎಂಬ ಗಾಯನ ಪ್ರಕಾರವನ್ನು ಮತಂಗನು (ಕ್ರಿ.ಶ.5ನೇ ಶತಮಾನ) ತನ್ನ 'ಬೃಹದ್ದೇಶಿ' ಎಂಬ ಗ್ರಂಥದಲ್ಲಿ ವಿವರಿಸಿರುವುದನ್ನು ಅನೇಕ ವಿದ್ವಾಂಸರು ಉಲ್ಲೇಖಿಸುತ್ತಾರೆ. ಬಸವಣ್ಣನವರ 'ಲೌಕಿಕರ ಕಂಡು ಆಡುವೆ, ಹಾಡುವೆ' ಎಂದಿದ್ದಾರೆ. ಅಲ್ಲದೆ 'ನಾದಪ್ರಿಯ ಶಿವನಲ್ಲ' 'ನಾದವ ನುಡಿಸಿದ ರಾವಳಂಗೆ ಅರೆ ಆಯುಷ್ಯವಾಯಿತ್ತು. ಎಂಬ ಸಾಲುಗಳ ಮೂಲಕ 'ಹಾಡುವಿಕೆ'ಗಿಂತ ಭಕ್ತಿಯೇ ಮುಖ್ಯ ಎಂದಿದ್ದಾರೆ.

ಬಸವಣ್ಣನವರು ಸಂಗೀತವನ್ನು ಅನಾಹತನಾದದ ದರ್ಶನಕ್ಕಾಗಿ ಬಳಸುತ್ತಾರೆಯೇ ವಿನಾ ಲೌಕಿಕವಿಚಾರಕ್ಕಾಗಿ ಅಲ್ಲ. ಅನಾಹತ ನಾದದ ಆಂತರ್ಯವನ್ನು 'ಮುಟ್ಟುವ ತೆರನನರಿಯದನ್ನಕ್ಕ' (ಅದೇ ವಚನ) ಎಂದು ಪ್ರಶ್ನಿಸಿಕೊಳ್ಳುತ್ತಲೇ ತಮ್ಮ ಸಾಧನೆಯ ಪಥದಲ್ಲಿ ಮುಂದರಿಯುತ್ತಾರೆ. ಕಿವಿಯೊಳಗಿನ ಕಿವಿಯಿಂದ ಅನಾಹತ ನಾದದ ಆನಂದ ಪಡೆಯಲು ತವಕಿಸುತ್ತಾರೆ. ಅನಾಹತ ನಾದವನ್ನು ಅಂತರಂಗದಲ್ಲಿ ಆವಿಷ್ಕರಿಸಿಕೊಳ್ಳಲು 'ಅರಿವನ್ನಕ್ಕರ ಹಾಡಿದೆ' ಎಂದು ಹಂಬಲಿಸುತ್ತಾರೆ. ಆ ಅನಾಹತ ನಾದವೇ ಕೂಡಲಸಂಗಮದೇವ. ■

(ಕೃಪೆ :- ಪ್ರಜಾವಾಣಿ, ಸಾಪ್ತಾಹಿಕ ಪುರವಣಿ ಭಾನುವಾರ ದಿನಾಂಕ : 12 ಮೇ 2013)

Many miracles Mataji has done
And thank God 'Basava Dharma' was
brought into existence
Teachings and Blessings were
showered on all equally
Altered thousands of lives behavior
Jewel of the Universe, which cannot be valued
Inn you are Mataji to all Sharana's
forever and forever

By -V. Shambu Linga

ಕೂಡಲ ಸಂಗಮದಲ್ಲಿ ತರಬೇತಿ ಶಿಬಿರ

ಬಸವ ತತ್ತ್ವ ತರಬೇತಿ ಶಿಬಿರವನ್ನು ದೇವ(ಭಾನು)ವಾರ ದಿ.16-6-2013ರಿಂದ 30-6-2013ರ ವರೆಗೆ ಕೂಡಲಸಂಗಮದಲ್ಲಿ ಏರ್ಪಡಿಸಲಾಗಿದೆ. ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಪೂಜ್ಯಶ್ರೀ ಜಗದ್ಗುರು ಬಸವ ಕುಮಾರ ಸ್ವಾಮಿಗಳು, ಪೂಜ್ಯಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮಿಗಳು, ಪೂಜ್ಯ ಶ್ರೀ ಸದ್ಗುರು ಮಾತೆ ಜ್ಞಾನೇಶ್ವರಿ, ಪೂಜ್ಯಶ್ರೀ ಸದ್ಗುರು ಮಾತೆ ಸತ್ಯಾದೇವಿ ಇವರ ನೇತೃತ್ವದಲ್ಲಿ ಶಿಬಿರವು ಸಾಗಲಿದೆ. ತಾತ್ತ್ವಿಕವಾಗಿ ತರಬೇತಿ ನೀಡಲಾಗುವುದಲ್ಲದೆ ಯೋಗಾಸನ, ಪ್ರಾಣಾಯಾಮ ಮತ್ತು ಧ್ಯಾನದ ತರಗತಿ ನಡೆಸಲಾಗುವುದು. ಲಿಂಗಾಂಗ ಯೋಗದ ಕುಂಡಲಿನಿ ಜಾಗೃತಿ ಸಾಧನೆ ಕುರಿತು ಮಾಹಿತಿ ನೀಡಲಾಗುವುದಲ್ಲದೆ ಲಿಂಗ ಧಾರಣೆ, ನಾಮಕರಣ, ವಿವಾಹ, ಶವ ಸಂಸ್ಕಾರ. ಲಿಂಗೈಕ್ಯ ಸಂಸ್ಮರಣೆ ಇತ್ಯಾದಿ ವಿಧಿವಿಧಾನಗಳ ಬಗ್ಗೆ ತರಬೇತಿ ನೀಡಲಾಗುವುದು.

ದಿ.30-6-2013ರಂದು ಶಿಬಿರದ ಸಮಾರೋಪ, ಪೂಜ್ಯ ಅಪ್ಪಾಜಿಯವರ 19ನೆಯ ಲಿಂಗೈಕ್ಯ ಸಂಸ್ಮರಣೆ ಮಾತ್ರವಲ್ಲದೆ ಪೂಜ್ಯ ಅಪ್ಪಾಜಿಯವರ ಐಕ್ಯ ಸ್ಥಾನ ಕೂಡಲಸಂಗಮದ ಮಹಾಮನೆ ಆವರಣದಲ್ಲಿ ಅವರ 63 ಅಡಿ ಎತ್ತರದ ಪುತ್ಥಳಿ ನಿರ್ಮಾಣಕ್ಕೆ ನಾಂದೀಪೂಜೆ ನೆರವೇರಿಸಲಾಗುವುದು.

1. ಶಿಬಿರಾರ್ಥಿಗಳಿಗೆ ಒಬ್ಬರಿಗೆ ಶಿಬಿರ ಶುಲ್ಕ 1000 (ಒಂದು ಸಾವಿರ) ರೂ.
2. ವಿದ್ಯಾರ್ಥಿಗಳಿಗೆ ಮತ್ತು ಆರ್ಥಿಕವಾಗಿ ದುರ್ಬಲರಾದವರಿಗೆ 600(ಆರುನೂರು)ರೂ.
3. ತುಂಬಾ ಆಸಕ್ತರಿದ್ದು ಹಣಕಟ್ಟಲು ಅಶಕ್ತರಾದವರಿಗೆ ಉಚಿತ.
4. ಆರ್ಥಿಕವಾಗಿ ಅನುಕೂಲತೆ ಇದ್ದವರು ಶಿಬಿರ ನಿರ್ವಹಣೆಗೆ ಹೆಚ್ಚಿನ ಪ್ರಮಾಣದಲ್ಲಿ ಕಾಣಿಕೆ ನೀಡಲು ಅವಕಾಶ ಉಂಟು.
5. ಬಹಳ ವರ್ಷಗಳಿಂದ ಶಿಬಿರವನ್ನು ನಡೆಸಲಾಗಿಲ್ಲ. ಕ್ರಿಯಾ ಮೂರ್ತಿ ತರಬೇತಿ ಅತ್ಯಗತ್ಯವಾಗಿದೆ. ತರಬೇತಿಯ ನಂತರ ಕ್ರಿಯಾಮೂರ್ತಿ ದೀಕ್ಷೆಯನ್ನು ಸಹ ಕೊಡಲಾಗುವುದು.
6. ರಾಷ್ಟ್ರೀಯ ಬಸವ ದಳಗಳವರು ಆರ್ಥಿಕವಾಗಿ ಅಶಕ್ತರಾಗಿ, ಕ್ರಿಯಾಮೂರ್ತಿಯಾಗಲು ಆಸಕ್ತಿ ಇರುವವರಿಗೆ ಪ್ರಯಾಣದ ಖರ್ಚು, ಶಿಬಿರ ಶುಲ್ಕ ಕೊಟ್ಟು ತರಬೇತಿಗೆ ಕಳಿಸಬೇಕೆಂದು ಕೋರಿಕೆ. ಈ ಶಿಬಿರದ ಸದುಪಯೋಗವನ್ನು ಆಸಕ್ತರು ಮಾಡಿಕೊಳ್ಳುವಿರಾಗಿ ನಂಬಿದ್ದೇವೆ.

ಪೂಜ್ಯಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಮಂಟಪ, 2035
20ನೆಯ ಮೇನ್, 2ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು-560010
9448137508

ಪೂಜ್ಯಶ್ರೀ ಸದ್ಗುರು ಮಾದೇಶ್ವರ ಸ್ವಾಮಿಗಳು
ಮಹಮನೆ ಮಹಾಮಠ, ಶರಣಲೋಕ,
ಕೂಡಲಸಂಗಮ-587115
ತಾ-ಹುನಗುಂದ, ಜಿ-ಬಾಗಲಕೋಟೆ
9448046554

ಬ್ಯಾಂಕ್ ಡ್ರಾಫ್ಟ್, ಮನಿಯಾರ್ಡರ್ ಮಾಡುವವರು
ಬಸವ ಧರ್ಮ ಪೀಠ, ಬೆಂಗಳೂರು ಅಥವಾ
ಬಸವ ಧರ್ಮ ಪೀಠ, ಕೂಡಲಸಂಗಮ
ಎಂದು ಬರೆಸಬೇಕು.



ಬೆಳಗಾವಿಯಲ್ಲಿ ರಾಷ್ಟ್ರೀಯ ಬಸವ ದಳದಿಂದ ಬೆಳ್ಳಿ ಖಡ್ಗ ಸಮರ್ಪಣೆ



ಧಾರವಾಡ ರಾಷ್ಟ್ರೀಯ ಬಸವ ದಳದಿಂದ ಚಿನ್ನವತ್ತಳೆ ಸಮರ್ಪಣೆ




ಪೂಜ್ಯ ಗಂಗಾ ಮಾತಾಜಿಯವರಿಂದ ನೆನಪಿನ ಕಾಣಿಕೆ ಸಮರ್ಪಣೆ



ಬಸವೋತ್ಸವ – ಶಾಸಕ ಸೋಮಶೇಖರಯ್ಯ ಅವರಿಂದ ಉದ್ಘಾಟನೆ



ಬಸವೋತ್ಸವ – ಪೂಜ್ಯ ಚನ್ನಬಸವಾನಂದ ಸ್ವಾಮೀಜಿಯವರಿಂದ ಪೀಠಾರೋಹಣ





111 ಅಡಿ ಪುತ್ಥಳಿಗೆ ನಾಂದೀ ಪೂಜೆ. ಮತ್ತು ಡಾ|| ಸಿ. ಸೋಮಶೇಖರ್ ಅವರಿಂದ ಧ್ವಜಾರೋಹಣ



ಹೈದರಾಬಾದ್ ನಗರದಲ್ಲಿ ದಿ. 18-05-2013 ಬಸವ ಜಯಂತಿ ಆಚರಣೆ



ಹೈದರಾಬಾದ್ ನಗರದಲ್ಲಿ ಪೂಜ್ಯ ಮಾತಾಜಿಯವರ ಭವ್ಯ ಮೆರವಣಿಗೆ





ಗಂಗಮ್ಮ ಸೋಬಾನದ ಅವರಿಂದ ಅಕ್ಕ ರತ್ನ ಪ್ರಶಸ್ತಿ. ಮತ್ತು
ಪೂಜ್ಯ ಗಂಗಾಮಾತಾಜಿಯವರಿಂದ ಪೀಠಾರೋಹಣ



ಬೆಳಗಾವಿಯಲ್ಲಿ ಲಿಂಗಾಯತ ಧರ್ಮ ಪೀಠದ ಕಟ್ಟಡ ಉದ್ಘಾಟನೆ



ಶಾಸಕ ಅರವಿಂದ ಬೆಲ್ಲದ ಅವರಿಂದ ಶರಣೋತ್ಸವ ಉದ್ಘಾಟನೆ



ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ|| ಜಯಕುಮಾರ ಅವರಿಂದ ಪೀಠಾರೋಹಣ ಉದ್ಘಾಟನೆ

ವಚನ ಪ್ರಭೆ

1. ನೆಲದ ಮರೆಯ ಸಿರಿಯಂತೆ
ಮೆದುಳಮರೆಯ ಅರಿವಿನಂತೆ
ಜ್ಞಾನದ ಮರೆಯ ಸುಜ್ಞಾನದಂತೆ
ಅಂಗಧ್ಯಾನದ ಮರೆಯ ಲಿಂಗಧ್ಯಾನದಂತೆ
"ಲಿಂಗದೇವ" ನಿಗೆ ಅರ್ಚನೆ ಅರ್ಪಣೆ
ಅನುಭಾವವ ಮೆರೆದೊಡೆ
ಲಿಂಗಾಂಗದ ನರಜನ್ಮ ಸಾರ್ಥಕವೆಂದ
ಎನ್ನ ಹೃದಯಪ್ರಿಯ ಬಸವಾ...... ಚನ್ನಬಸವಾ..

2. ನೀರು ಜಗಕೆ ಜೀವಜಲವಾಗಿಹುದು
ಕ್ಷೀರವು ಬಸುರಿಳಿದ ಶಿಶುವಿಗೆ ಜೀವಕ್ಕಾಧಾರವಹುದು
ಅಮೃತವು ಪುರಾಣ ದೇವರ ಸುರಾಪಾನವಾಗಿಹುದು
ನಮ್ಮ ಬಸವ ಧರ್ಮ ಶರಣರ ವಚನಾಮೃತವು
ಏಕದೇವೋಪಾಸನೆಯ "ಲಿಂಗದೇವಾ" ಅಹುದೆಂದ
ಎನ್ನ ಹೃದಯಪ್ರಿಯ ಬಸವಾ ಚನ್ನಬಸವಾ

3. ಲಿಂಗ ಎನ್ನಿರಿ, ಲಿಂಗ ಎನ್ನಿರಿ
ನಮ್ಮ "ಲಿಂಗದೇವ"ಗೆ ಶರಣು ಶರಣೆಂದು ಶರಣಾಗಿರಿ
ಭವಸಾಗರವ ದಾಟಿ ಭಕ್ತ ಜಯಿಸಲು
ಬಸವ ಶರಣಾನಂದದ "ಲಿಂಗದೇವ" ಮೊದಲೆಂದ
ಎನ್ನ ಹೃದಯಪ್ರಿಯ ಬಸವಾ.... ಚನ್ನಬಸವಾ

4. ಆಕಾಶನೋಡಿದೆ ಮುಟ್ಟೋಕೆ ಆಗಲಿಲ್ಲ
ಭೂಮಿ ನೋಡಿದೆ, ಅಳೆಯೋಕೆ ಆಗಲೊಲ್ಲದು
ಸಾಗರಗಳ ನೋಡಿದೆ ತಳ ಕಾಣಲೊಲ್ಲದು
ವಿಶ್ವಧರ್ಮ ಪ್ರವಚನವನು ಕೇಳಿದೆ
ಲಿಂಗಾಯತ ಧರ್ಮದ ಮಾತಾಶ್ರೀ ಮಾತಾಜಿ
ಲಿಂಗನುಡಿಯಲಿ "ಲಿಂಗದೇವ"ನ ಕುರುಹ ಕಂಡೆ ಎಂದ
ಎನ್ನ ಹೃದಯಪ್ರಿಯ ಬಸವಾ.. ಚನ್ನಬಸವಾ

5. ನಾ ಮಾಡಿದ ಕರ್ಮ ಬಲವಂತವಾದರೆ
ಅದು ನೀನು ಮಾಡಿಸಿದುದೆನುವೆ
ಆಡಿಸುವವನೂ, ಮಾಡಿಸುವವನೂ, ನುಡಿಸುವವನೂ
ನೀನು.....ನೀನೇ......"ಲಿಂಗದೇವಾ"...... ಲಿಂಗದೇವಾ
ನಾನು ನಿನಗೆ ಒಲಿದವನು, ನೀನು ಎನಗೆ ಒಲಿದವನು
ಓ ಎನ್ನ ಹೃದಯಪ್ರಿಯ ಬಸವಾ.... ಚನ್ನಬಸವಾ....

– ಸೊ.ದಾ. ವಿರುಪಾಕ್ಷಗೌಡ
ಅಮರಾವತಿ, ಹೊಸಪೇಟೆ

ಎರಡು ಸುತ್ತಿನ ಪ್ರವಾಸ

-ಮಾತಾಜಿ

ಏಪ್ರಿಲ್ ತಿಂಗಳಿನಿಂದ ಜೂನ್ ಎರಡನೆಯ ತಾರೀಖಿನವರೆಗೆ ಕಾಲಲ್ಲಿ ಚಕ್ರವನ್ನು ಕಟ್ಟಿಕೊಂಡಂತೆ ಪ್ರವಾಸ ಮಾಡುವುದಾಯಿತು. ದಿ.6-4-2013 ರಂದು ಬೆಂಗಳೂರಿನಿಂದ ಹೊರಟು ಭದ್ರಾವತಿ ತಲುಪಿದ್ದಾಯಿತು. ಭದ್ರಾವತಿ ರಾಷ್ಟ್ರೀಯ ಬಸವ ದಳದವರು ಬಸವ ಮಂಟಪದಲ್ಲಿ ಅಭಿನಂದನ ಸಮಾರಂಭವನ್ನು ಇಟ್ಟುಕೊಂಡಿದ್ದರು. ದಿ.7-4-2013ರಂದು ನಮ್ಮ ಪ್ರೀತಿಯ ಶಿಷ್ಯರೂ ಕೊಮ್ಮನಾಳು ರಾಷ್ಟ್ರೀಯ ಬಸವ ದಳದ ಸಕ್ರಿಯ ಕಾರ್ಯಕರ್ತರೂ ಆದ ಶರಣ ಯೋಗೀಶರವರ ಮದುವೆಯಲ್ಲಿ ಭಾಗವಹಿಸಿದ್ದಾಯಿತು. ಮದುವೆ ಮುಗಿಸಿ, ಪ್ರಸಾದ ಸ್ವೀಕರಿಸಿ ಶಿವಮೊಗ್ಗದಿಂದ ಗದಗಿಗೆ ಪ್ರಯಾಣ ಬೆಳೆಸಿದ್ದಾಯಿತು. ಶಿವ (ಸೋಮ)ವಾರ ದಿ.8-4-2013ರಂದು ಗದಗಿನಲ್ಲಿ ಹಾವೇರಿಯ ಶರಣೆ ಜಯಶ್ರೀ ಬಸವರಾಜ ಶಿವಪುರ ಅವರ ಮಗ ಸಂಜಯ ಬಸವರಾಜ ಶಿವಪುರ ನೂತನ ಗೃಹವನ್ನು ಕಟ್ಟಿಸಿದ್ದು, ಗೃಹ 'ಬಸವ ಪ್ರಭೆ'ಯ ಗುರು ಪ್ರವೇಶದೊಡನೆ ಗೃಹಪ್ರವೇಶವನ್ನು ಇಟ್ಟುಕೊಂಡಿದ್ದರು. ಗೃಹ ಪ್ರವೇಶ ಮುಗಿಸಿ ಧಾರವಾಡಕ್ಕೆ ಬಂದೆವು. ದಿ.10-4-2013ರಂದು ಬೆಳಗಾವಿಯ ಶರಣ ಗಡಗಲಿ ಅವರ ಮನೆಯಲ್ಲಿ ವಿಶೇಷ ಪೂಜೆ, ಅವರ ಮಗಳಿಗೆ ಗರ್ಭಲಿಂಗಧಾರಣೆ ಮಾಡಿ ಪ್ರಸಾದದ ನಂತರ ಅಲ್ಲಮಗಿರಿಗೆ ಪ್ರಯಾಣ ಬೆಳೆಸಲಾಯಿತು.

ಹಿಂದಿನ ವರ್ಷ ಮಳೆಯು ಸರಿಯಾಗಿ ಆಗದೆ ಬೋರ್‌ಗಳೆಲ್ಲ ಬತ್ತಿ ಹೋದುದರಿಂದಲೂ ನೀರನ್ನು ಪ್ರತಿವರ್ಷ ಕೊಡುತ್ತಿದ್ದವರು ಈ ವರ್ಷ ನೀರನ್ನು ಒದಗಿಸಲು ಆಗುವುದಿಲ್ಲ ಎಂದು ಹೇಳಿದ್ದರಿಂದ ಪ್ರತಿವರ್ಷದಂತೆ ಅಲ್ಲಮಪ್ರಭುಗಿರಿಯ ಮೇಲೆ ಕಾರ್ಯಕ್ರಮ ಮಾಡದೆ ಹಾತ್‌ಕಣಂಗಲೆ-ಇಚಲಕರಂಜಿ ರಸ್ತೆಯ ಮೇಲಿರುವ ಶ್ರೀ ರಘು ಜಾನಕಿ ಸಾಂಸ್ಕೃತಿಕ ಭವನದಲ್ಲಿ ಲಿಂಗಾಯತ ಗಣ ಮೇಳವನ್ನು ಏರ್ಪಡಿಸಲಾಗಿತ್ತು. ದಿ.11,12 ಮತ್ತು 13ರಂದು ಅದ್ದೂರಿಯಾಗಿ, ಅರ್ಥಪೂರ್ಣವಾಗಿ ಗಣ ಮೇಳಾಪವು ಜರುಗಿತು. ಕಾರ್ಯಕ್ರಮ ಮುಗಿಸಿ ಬೆಂಗಳೂರಿಗೆ ಬಂದೆನು.

ಏಪ್ರಿಲ್ 27, 28 ಮತ್ತು 29ರಂದು ಧಾರವಾಡದಲ್ಲಿ ನಾಲ್ಕನೆಯ ಶರಣೋತ್ಸವವು ಏರ್ಪಾಡಾಗಿದ್ದಿತು. ಸಮಯವು ಬಹಳ ಕಡಿಮೆ ಉಳಿದಿತ್ತು. ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮಿಗಳು, ಪೂಜ್ಯ ಶ್ರೀ ಮಾತೆ ಜ್ಞಾನೇಶ್ವರಿ, ಪೂಜ್ಯ ಶ್ರೀ ಮಾತೆ ಸತ್ಯಾದೇವಿ, ಪೂಜ್ಯ ಶ್ರೀ ಮಾತೆ ಸಿದ್ಧೇಶ್ವರಿ ಅವರುಗಳು ಲಿಂಗಾಯತ ಗಣಮೇಳಾಪದ ಸಿದ್ಧತೆ ಪೂರೈಸಿ ಧಾರವಾಡದ ಶರಣೋತ್ಸವದ ಸಿದ್ಧತೆಗೆ ಬರಬೇಕಾಗಿತ್ತು. ಯುಗಾದಿ ಏಪ್ರಿಲ್‌ಗೆ ಮುಂದೆ ಹೋಗಿದ್ದರಿಂದ ಏಪ್ರಿಲ್ 27ಕ್ಕೆ ಕೇವಲ 13 ದಿವಸ ಉಳಿದಿದ್ದವು ಆದರೂ ಇವರುಗಳು ಧಾರವಾಡದ ಶರಣೆಯರ ಬಳಗ ಸೇರಿ ತ್ವರಿತ ಸಿದ್ಧತೆಗೆ ತೊಡಗಿದರು. ಆದರೆ ಅಷ್ಟರಲ್ಲಿ ಚುನಾವಣೆ ಘೋಷಣೆಯಾದ್ದರಿಂದ ನಾವು ಅನಿವಾರ್ಯವಾಗಿ ಒಂದು ತಿಂಗಳು ಮುಂದಕ್ಕೆ ಹಾಕಬೇಕಾಯಿತು. ಚುನಾವಣಾ ನೀತಿ ಸಂಹಿತೆಯ ಪ್ರಕಾರ ಮೈಕ ಹಚ್ಚಿ ಕಾರ್ಯಕ್ರಮ ಮಾಡುವಂತಿಲ್ಲ, ಊಟಕ್ಕೆ ಹಾಕುವಂತಿಲ್ಲ. ಬಹಳವೆಂದರೆ ದೊನ್ನೆಯಲ್ಲಿ ಪ್ರಸಾದ ಕೊಡಬಹುದು. ಇವೆರಡೂ ಸಾಧ್ಯವಿಲ್ಲದ್ದರಿಂದ ಶರಣೋತ್ಸವವನ್ನು ದಿ.25.26 ಮತ್ತು 27ಕ್ಕೆ ಮುಂದೂಡಲಾಯಿತು. ಬೆಂಗಳೂರಿಗೆ ಬಂದೆನು.

■ ಬಸವ ವಚನಾಮೃತ ■

ದೇವ ಸಹಿತ ಭಕ್ತ ಮನೆಗೆ ಬಂದರೆ
ಕಾಯಕವಾವುದೆಂದು ಬೆಸಗೊಂಡೆನಾದರೆ,
ನಿಮ್ಮಾಣೆ ! ನಿಮ್ಮ ಪುರಾತರಾಣೆ !
ತಲೆದಂಡ ! ತಲೆದಂಡ !
ಲಿಂಗದೇವಾ, ಭಕ್ತರಲ್ಲಿ ಕುಲವನರಸಿದರೆ ಎನ್ನ ರಾಣಿವಾಸದಾಣೆ !

ಬೆಳಗಾವಿಯಲ್ಲಿ ಖಡ್ಗದ ಕೊಡುಗೆ

ಬೆಳಗಾವಿಯ ಆಂಜನೇಯ ನಗರದ ಬಸವ ಮಾರ್ಗದಲ್ಲಿರುವ ಲಿಂಗಾಯತ ಧರ್ಮಪೀಠದ ಪೂಜ್ಯ ಶ್ರೀ 1118 ನಿರಂಜನ ಜಗದ್ಗುರು ಬಸವ ಪ್ರಭು ಮಹಾಸ್ವಾಮಿಗಳು ಏಪ್ರಿಲ್ 29,30 ಮತ್ತು ಮೇ 1ರಂದು ಲಿಂಗಾಯತ ಧರ್ಮ ಸಮ್ಮೇಳನವನ್ನು ಏರ್ಪಡಿಸಿದ್ದರು. ದಿ.30ರಂದು ನಮಗೆ ಅಭಿನಂದನ ಸಮಾರಂಭವನ್ನು ಸಮ್ಮೇಳನದಲ್ಲಿ ವ್ಯವಸ್ಥೆ ಮಾಡಿದ್ದರು. ರಾಷ್ಟ್ರೀಯ ಬಸವ ದಳದವರು ಈ ಕಾರ್ಯಕ್ರಮಕ್ಕೆ ಕೈಜೋಡಿಸಿದ್ದರು. ಸಂಜೆ 4-30ಕ್ಕೆ ಮಹಾಂತೇಶ ನಗರದ ಬಸವ ಮಂಟಪದ ಬಳಿಯಿಂದ ಭವ್ಯವಾದ ಮೆರವಣಿಗೆಯಲ್ಲಿ ನಮ್ಮನ್ನು ಕರೆದೊಯ್ದರು. ಲಿಂಗಾಯತ ಧರ್ಮ ಪೀಠದ ನೂತನ ಕಟ್ಟಡವನ್ನು ಉದ್ಘಾಟಿಸಿದೆವು. ಕಾರ್ಯಕ್ರಮದ ದಿವ್ಯ ಸನ್ನಿಧಿಯನ್ನು ಪರಮಪೂಜ್ಯ ಶ್ರೀ ಜಗದ್ಗುರು ಬಸವಪ್ರಭು ಸ್ವಾಮಿಗಳು ವಹಿಸಿದ್ದರು. ಬೈಲೂರಿನ ಚನ್ನಬಸವ ಜ್ಞಾನ ಮಂಟಪದ ಪೂಜ್ಯ ಶ್ರೀ ನಿಜಗುಣಾನಂದ ಸ್ವಾಮಿಗಳು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಬೆಳಗಾವಿ ಜಿಲ್ಲಾ ಲಿಂಗಾಯತ ಸಮಾಜದ ಪ್ರಮುಖರಾದ ಶರಣ. ಬಿ.ವಿ. ಕಟ್ಟಿಯವರು ಬಸವ ಧ್ವಜಾರೋಹಣ ಮಾಡಿದರು. ಬೆಳಗಾವಿ ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಾದ ಶರಣ. ಕೆ.ಬಸವರಾಜ ಮತ್ತು ಬೆಳಗಾವಿ ಜಿಲ್ಲಾ ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಾದ ಡಾ॥ ಶಿವಗೌಡ ಪಾಟೀಲರು ಬೆಳಗಾವಿ ಜಿಲ್ಲಾ ರಾಷ್ಟ್ರೀಯ ಬಸವ ದಳಗಳವರು ಸೇರಿ ಸಿದ್ಧಪಡಿಸಿದ 750 ಗ್ರಾಂ ತೂಕದ ಬೆಳ್ಳಿಯ ಖಡ್ಗವನ್ನು ಪೂಜ್ಯ ಸ್ವಾಮೀಜಿಯವರ ಮೂಲಕ ನಮಗೆ ಸಮರ್ಪಿಸಿದರು ಮತ್ತು ಅಭಿನಂದನಾ ಪತ್ರವನ್ನು ಶರಣ.ಕೆ. ಬಸವರಾಜ ಅವರು ಓದಿ ಸಮರ್ಪಿಸಿದರು.

"ಅಷ್ಟು ಹಣ ವೆಚ್ಚವಾದ ಬೆಳ್ಳಿಯ ಖಡ್ಗದ ಮೂಲಕ ಹಣವನ್ನು ನಿಷ್ಕ್ರಿಯಗೊಳಿಸಲಾಯಿತು. ಬೆಳ್ಳಿಯ ವಸ್ತುವನ್ನು ಕಾಯುವುದೂ ಒಂದು ಕಷ್ಟದ ಕೆಲಸ. ಅದೇ ಹಣವನ್ನು ಕೊಟ್ಟಿದ್ದರೆ ಸಂಸ್ಥೆಗೆ ಉಪಯೋಗವಾಗುತ್ತಿತ್ತು. ಆದರೂ ಗಂಡು ಮೆಟ್ಟಿನ ನೆಲವಾದ, ವೀರರಾಣಿ ಕಿತ್ತೂರು ಚನ್ನಮ್ಮನ ವೀರಭೂಮಿಯಾದ ಬೆಳಗಾವಿಯಿಂದ ಶೌರ್ಯದ ಸಂಕೇತವಾದ ಖಡ್ಗವನ್ನು ಕೊಟ್ಟಿರುವುದು ಬಹಳ ಸಾಂಕೇತಿಕ ಮತ್ತು ಅರ್ಥಗರ್ಭಿತ. ನನಗೆ ಉತ್ಸಾಹ, ಧೈರ್ಯ, ಆತ್ಮ ಸ್ಥೈರ್ಯವನ್ನು ತುಂಬಲು ಖಡ್ಗವನ್ನು ಕೊಟ್ಟಿರುವುದಾಗಿ ಭಾವಿಸಿ ಧನ್ಯವಾದ ಹೇಳುತ್ತೇನೆ." ಎಂದು ನನ್ನ ಅಭಿಪ್ರಾಯ ವ್ಯಕ್ತಪಡಿಸಿದೆ. ಅಭಿನಂದನ ಸಮಾರಂಭ ಮುಗಿಸಿ ಧಾರವಾಡಕ್ಕೆ ಬಂದೆನು.

ದಿ.3-5-2013ರಂದು ಬೆಳಗಾವಿಯಲ್ಲಿ ಒಂದು ವಿವಾಹ. ಹರಳಯ್ಯ ಸಮಾಜದ ಓರ್ವ ನಿವೃತ್ತ ಅಧಿಕಾರಿಗಳು ಬಸವ ತತ್ತ್ವದ ಪ್ರಕಾರ ತಮ್ಮ ಮಗನ ಮದುವೆ ಮಾಡಿಸಬೇಕೆಂಬ ಹಂಬಲದಿಂದ ಧಾರವಾಡದಲ್ಲಿದ್ದ ನನಗೆ ಆಹ್ವಾನ ನೀಡಿದ್ದರು. ವಧುವರರಿಗೆ ಒಂದೊಂದು ರುದ್ರಾಕ್ಷಿ ಧರಿಸಿ ಬಸವಾಯತ ದೀಕ್ಷೆ ನೀಡಿ ಮದುವೆಯನ್ನು ಮಾಡಿಸಿದೆವು. ಅವರು ಬಹಳ ಸಂತೃಪ್ತರಾದರು. ಮದುವೆ ಮುಗಿಸಿದವರೇ ಬೆಂಗಳೂರಿನತ್ತ ಪ್ರಯಾಣ ಬೆಳೆಸಬೇಕಾಗಿತ್ತು. ಏಕೆಂದರೆ ಮೇ 4-5 ರಾಮನಗರದಲ್ಲಿ ಕಾರ್ಯಕ್ರಮವಿದ್ದಿತು.

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಚಿಕ್ಕಮಗಳೂರು ನಗರದಲ್ಲಿ ವಿಶ್ವಧರ್ಮ ಪ್ರವಚನವನ್ನು ಮಾಡುತ್ತಿದ್ದರು. ದಿ.11-5-2013 ಶರಣವಾರದಂದು ಗುರುವಂದನಾ ಮತ್ತು ಅಭಿನಂದನಾ ಸಮಾರಂಭವು, ದಿ.12ರಂದು ಪ್ರವಚನದ ಸಮಾರೋಪ ಸಮಾರಂಭವೂ ಏರ್ಪಾಡಾಗಿದ್ದಿತು. ಮಳೆಗಾಲವು ಧಾವಿಸಿ ಮಳೆಯು ಧೋ ಧೋ ಎಂದು ಸುರಿಯುತ್ತಿದ್ದರೂ ವಿದ್ಯಾಭವನ ಎಂಬ ಸುಂದರವಾದ, ಅಚ್ಚುಕಟ್ಟಾದ ವಿಶಾಲವಾದ ಹಾಲ್ ಇದ್ದುದರಿಂದ ಕಾರ್ಯಕ್ರಮವು ಸಾಂಗವಾಗಿ ನೆರವೇರಿತು. ಜಿಲ್ಲಾ ಪರಿಷತ್ ಅಧ್ಯಕ್ಷರಾದ ಶರಣೆ ರೇಖಾ

ಹುಲಿಯಪ್ಪ ಗೌಡ್ರು ಉದ್ಘಾಟಿಸಿದರು. ಬಸವ ಮಂದಿರದ ಪೂಜ್ಯ ಶ್ರೀ ಜಯ ಬಸವಾನಂದ ಸ್ವಾಮಿಗಳು ಧ್ವಜಾರೋಹಣ ಮಾಡಿದರು. ಕಾರ್ಯಕ್ರಮ ಮುಗಿಸಿ ರಾತ್ರಿ 12 ಗಂಟೆಗೆ ಚಿಕ್ಕಮಗಳೂರಿನಿಂದ ಹೊರಟು ಬೆಳಗಿನ ಜಾವ 4 ಗಂಟೆಗೆ ಬೆಂಗಳೂರು ತಲುಪಿದೆವು. ದಿ.13ರಂದು ಬೆಳಿಗ್ಗೆ 10–30ಕ್ಕೆ ಬೆಂಗಳೂರು ಬಸವ ಮಂಟಪದ ಮುಂದೆ 880ನೆಯ ಬಸವ ಜಯಂತಿ ಕಾರ್ಯಕ್ರಮ. ಖ್ಯಾತ ವೈದ್ಯರಾದ ಶರಣೆ. ವಿಜಯಲಕ್ಷ್ಮಿ ಬಾಳೇಕುಂದ್ರಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಮುಖ್ಯ ಉಪನ್ಯಾಸಕರಾಗಿ ಶರಣೆ ಸುಜಾತಾ ಎಂ. ಗೌಡ ಆಗಮಿಸಿದ್ದರು. ಶರಣ. ಎನ್. ಪುಟ್ಟರುದ್ರಪ್ಪ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶರಣ ಹೆಚ್.ಎಸ್.ಚನ್ನಬಸವಣ್ಣ, ಕಾರ್ಪೋರೇಟರ್ ಕೃಷ್ಣಪ್ಪ, ಬಿಜೆಪಿ ಮಹಿಳಾ ಮೋರ್ಚಾದ ಅಧ್ಯಕ್ಷೆ ಶಾಂತಾ ಕೃಷ್ಣಪ್ಪ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯೆ ಯಶೋದಾ ಕೃಷ್ಣಪ್ಪ, ಮಾಜಿ ನಗರ ಸಭಾ ಸದಸ್ಯರಾದ ಈ. ಕೃಷ್ಣಪ್ಪ ಆಗಮಿಸಿದ್ದರು. ಖ್ಯಾತ ಹೋಮಿಯೋಪತಿ ವೈದ್ಯ ಡಾ॥ ಬಸವರಾಜ ಹೂಗಾರ ಅವರನ್ನು ಸತ್ಕರಿಸಲಾಯಿತು. ಕುಮಾರಿಯರಾದ ಸ್ವಾತಿ ಮತ್ತು ಶ್ರುತಿ, ನಿಸರ್ಗಾ ನಾಗರಾಜು ನೃತ್ಯಾಭಿನಯ ಮಾಡಿದರು. ಕಾರ್ಯಕ್ರಮದ ನಂತರ ಗುರು ಬಸವಣ್ಣನವರ ಭಾವಚಿತ್ರದ ಮೆರವಣಿಗೆ ಜರುಗಿತು.

ಬಸವ ಜಯಂತಿ ಮುಗಿಸಿ ಪ್ರಸಾದ ಸ್ವೀಕರಿಸಿ ಮತ್ತೊಮ್ಮೆ ಕಾಲಿಗೆ ಚಕ್ರ ಕಟ್ಟಬೇಕಾಯಿತು. ಮರುದಿನ ಗುಲಬರ್ಗಾದಲ್ಲಿ ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಾದ ಶರಣ ರೇವಣಪ್ಪ ಹೆಗ್ಗಣೆಯವರ 50ನೆಯ ವರ್ಷದ ವಿವಾಹ ವಾರ್ಷಿಕೋತ್ಸವವು ಅದ್ದೂರಿಯಾಗಿ ಏರ್ಪಾಡಾಗಿದ್ದಿತು. ಹೀಗಾಗಿ ದಿ.13ರಂದು ಕರ್ನಾಟಕ ಎಕ್ಸ್‌ಪ್ರೆಸ್ಸಿನಲ್ಲಿ ಗುಲಬರ್ಗಾಕ್ಕೆ ಹೊರಡಬೇಕಾಯಿತು. ಬಂಧು ಬಳಗದವರು ಮಾತ್ರವಲ್ಲದೆ ವ್ಯಾಪಾರಿ ಮಿತ್ರರು, ಗುಲಬರ್ಗಾ ಬೀದರ, ಜಹೀರಾಬಾದ, ಘರಹತಾಬಾದ್ ಮುಂತಾದ ರಾಷ್ಟ್ರೀಯ ಬಸವ ದಳಗಳವರು ಎಲ್ಲ ಬೃಹತ್ ಸಂಖ್ಯೆಯಲ್ಲಿ ನೆರೆದಿದ್ದರು. ಶರಣ ರೇವಣಪ್ಪ ಹೆಗ್ಗಣೆ ಮತ್ತು ಶರಣೆ. ಸುಮಿತ್ರಾಬಾಯಿ ದಂಪತಿಗಳಿಗೆ ಪುಷ್ಪವೃಷ್ಟಿ, ಆರತಿ ಮಾಡಲಾಯಿತು.

ಇದೇ ವೇದಿಕೆಯ ಮೇಲೆ ಗುಲಬರ್ಗಾ ರಾಷ್ಟ್ರೀಯ ಬಸವ ದಳದವರು ನಮಗೂ ಅಭಿನಂದನೆ ಮಾಡಿ, ಅಭಿನಂದನಾ ಪತ್ರ ಶಾಲು ಮತ್ತು ನಿಧಿಯನ್ನು ನೀಡಿದರು. ವಿವಿಧ ರಾಷ್ಟ್ರೀಯ ಬಸವ ದಳಗಳವರು ಶಾಲು ಹೊದ್ದಿಸಿ, ಮಾಲಾರ್ಪಣೆ ಮಾಡಿದರು. ಗುಲಬರ್ಗಾದಿಂದ, ಜಹೀರಾಬಾದಿನ ಶರಣ. ಶಂಕರಪ್ಪ ಪಾಟೀಲರು ಕಳಿಸಿದ ಕಾರಿನಲ್ಲಿ ಬಸವ ಕಲ್ಯಾಣಕ್ಕೆ ಪ್ರಯಾಣ ಬೆಳೆಸಿದೆವು.

ದಿ.17–5–2013ರಂದು ಮಹಾರಾಷ್ಟ್ರದ ನಾಂದೇಡ ಜಿಲ್ಲೆಯ ಮುಕ್ರಾಮಾಬಾದ್ ಎಂಬಲ್ಲಿ ಲಿಂಗಾಯತ ಧರ್ಮ ಸಮ್ಮೇಳನ ಮತ್ತು ನಮಗೆ ಅಭಿನಂದನೆ ಕಾರ್ಯಕ್ರಮವಿದ್ದಿತು. ದಿ. 17ರಂದು ಬಸವ ಕಲ್ಯಾಣದಿಂದ ಹೊರಟು ಮಹಾರಾಷ್ಟ್ರದ ಉದಗೀರ್‌ಗೆ ಹೋಗಿ ಮಧ್ಯಾಹ್ನದ ಪ್ರಸಾದವನ್ನು ಶರಣ. ಡಾ॥ ಮಲ್ಲಿಕಾರ್ಜುನ ಮಿಠಾರೆ ಅವರ ಮನೆಯಲ್ಲಿ ಪೂರೈಸಿ ಮುಕ್ರಾಮಾಬಾದ್‌ಗೆ ಹೊರಟೆವು. ಹತ್ತು ಕಿಲೋಮೀಟರ್ ದೂರದಲ್ಲೇ ಸ್ವಾಗತಿಸಿ ಬೈಕ್ ರ‍್ಯಾಲಿಯ ಮೂಲಕ ಕರೆದೊಯ್ದರು. ಮಹಾರಾಷ್ಟ್ರದ ವಿವಿಧ ಭಾಗಗಳಿಂದ ಮಾತ್ರವಲ್ಲದೆ ಗಡಿಯ ಬೀದರ್ ಜಿಲ್ಲೆಯ ವಿವಿಧ ಭಾಗಗಳಿಂದ ಶರಣರು ಆಗಮಿಸಿದ್ದರು. ಮಹಾರಾಷ್ಟ್ರ ರಾಜ್ಯದ ಲಿಂಗಾಯತ ಧರ್ಮ ಮಹಾಸಭಾದ ರಾಜ್ಯಾಧ್ಯಕ್ಷರಾಗಿ ವಕೀಲರಾದ ಶರಣ. ಶಿವರಾಜ ಕಂಕರೆ ಅವರನ್ನು ಆಯ್ಕೆ ಮಾಡಲಾಯಿತು.

ಪೂಜ್ಯ ಶ್ರೀ ಜಗದ್ಗುರು ಬಸವಲಿಂಗ ಸ್ವಾಮಿಗಳು, ಅಲ್ಲಮ ಪ್ರಭು ಯೋಗ ಪೀಠ, ಅಲ್ಲಮಗಿರಿ ಇವರ ಗೌರವಾಧ್ಯಕ್ಷತೆಯಲ್ಲಿ ಮಹಾರಾಷ್ಟ್ರ ರಾಜ್ಯ ಸಮಿತಿಯನ್ನು ರಚಿಸಲಾಯಿತು.

ಕಾರ್ಯಕ್ರಮ ಮುಗಿಸಿ ಉದಗೀರಿಗೆ ಬಂದು ಪೂಜೆ–ಪ್ರಸಾದ ಪೂರೈಸಿ ರಾತ್ರಿ ಪ್ರಯಾಣ ಮುಂದುವರಿಸಬೇಕಾಯಿತು. ಜಹೀರಾಬಾದಿಗೆ ರಾತ್ರಿ 3 ಗಂಟೆಗೆ ಬಂದು ವಾಸ್ತವ್ಯ ಮಾಡಿ ದಿ.18ರಂದು ಬೆಳಗಿನ ಪೂಜೆ–ಉಪಾಹಾರ ಮುಗಿಸಿ ಹೈದರಾಬಾದ್‌ಗೆ ಹೊರಡಲಾಯಿತು. ಹೈದರಾಬಾದಿನ ವನಸ್ಥಲಿಪುರಂದಲ್ಲಿ ಆಂಧ್ರ ಪ್ರದೇಶ್ ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಾದ ಶರಣ. ಧನರಾಜ ಜೀರಗೆ ಅವರ ಮನೆಯಲ್ಲಿ ಮಧ್ಯಾಹ್ನದ ಪ್ರಸಾದ ಮುಗಿಸಿ ಜಿಯಾಗುಡ ಬಸವ ಮಂಟಪಕ್ಕೆ ಹೊರಟೆವು. ಬೆಂಗಳೂರಿನಂತೆ ಹೈದರಾಬಾದ್‌ನಲ್ಲೂ ವಾಹನ ದಟ್ಟಣೆ ಬಹಳ. ಬಸವ ಮಂಟಪದಲ್ಲಿ ಬಸವ ಮೂರ್ತಿಗೆ ಪೂಜೆ ಸಲ್ಲಿಸಿ ಸಾರೋಟು ರಥವನ್ನು ಏರಿದೆ. ನಾಲ್ಕೂ ಮುಕ್ಕಾಲಿಗೆ ಶುರುವಾದ ಮೆರವಣಿಗೆ ಕಾರ್ಯಕ್ರಮದ ಸ್ಥಳ ಮುಟ್ಟಲು ತೆಗೆದುಕೊಂಡದ್ದು 3 ತಾಸು. ಎಕ್ಸಿಬಿಷನ್ ಗ್ರೌಂಡ್ ಇರುವುದು ಹೈದರಾಬಾದಿನ ಹೃದಯಸ್ಥಾನದಲ್ಲಿ. ಅಲ್ಲಿ ಭವ್ಯವಾದ ವಿಶಾಲವಾದ ಹಾಲ್ ಅದರ ಸುತ್ತಲೂ ಕುಳಿತುಕೊಳ್ಳಲು ಪ್ರಶಾಂತವಾದ ಸ್ಥಳವಿದೆ. ಸುಮಾರು ನಲವತ್ತು ಸಂಘಟನೆಗಳವರು ಸೇರಿ ಬಸವ ಜಯಂತಿಯನ್ನು ಏರ್ಪಡಿಸಿದ್ದರು. ರಾಷ್ಟ್ರೀಯ ಬಸವ ದಳದ್ದೇ ಪ್ರಧಾನ ಪಾತ್ರ, ಬಿಳಿಯ ಸಮವಸ್ತ್ರ ಉಟ್ಟು ಕಾವಿಯ ಸ್ಕಾರ್ಫ್ ಧರಿಸಿದ ಶರಣ–ಶರಣೆಯರು ಸುಮಾರು ಐದು ಕಿಲೋಮೀಟರ್ ನಡೆದರು. ಕಾರ್ಯಕ್ರಮವು ಅದ್ದೂರಿಯಾಗಿ, ಅರ್ಥಪೂರಿತವಾಗಿ ನಡೆಯಿತು.

ಮರುದಿನ ದಿ.19–5–2013ರಂದು ಬೆಂಗಳೂರಿನ ನಗರ್ತರ ಪೇಟೆಯಲ್ಲಿರುವ ನಗರೇಶ್ವರ ದೇವಾಲಯದ ಕಲ್ಯಾಣಮಂಟಪದಲ್ಲಿ 'ಬಸವ ಭಕ್ತವೃಂದ'ದಿಂದ ಬಸವ ಜಯಂತಿ ಆಚರಣೆ, ಸಾಮೂಹಿಕ ಲಿಂಗಪೂಜೆಯ ಪ್ರಾತ್ಯಕ್ಷಿಕೆ. ಹೀಗಾಗಿ ಕಾರಿನಲ್ಲಿ ಟ್ರೈನಿನಲ್ಲಿ ಬರಲು ಸಾಧ್ಯವಿರಲಿಲ್ಲ. ಹೈದರಾಬಾದ್‌ನಿಂದ ಬೆಂಗಳೂರಿಗೆ ಸ್ಪೈಸ್‌ಜೆಟ್ ವಿಮಾನದಲ್ಲಿ ಬಂದು ನಗರೇಶ್ವರ ದೇವಾಲಯದ ಕಲ್ಯಾಣ ಮಂಟಪದಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗಿಯಾದೆ. ಜೊತೆಗೆ ಮಾತೆ ಜ್ಞಾನೇಶ್ವರಿಯವರನ್ನು ಕರೆದುಕೊಂಡು ಉಳಿದ ಲಗೇಜನ್ನು ಟ್ರೇನಿನಲ್ಲಿ ತೆಗೆದುಕೊಂಡು ಶರಣೆ. ಚಂದ್ರಕಲಾ ಬರುವಂತೆ ವ್ಯವಸ್ಥೆ ಮಾಡಿದ್ದೆವು. ದಿ. 22ರಂದು ಶರಣೋತ್ಸವದ ಸಲುವಾಗಿ ಧಾರವಾಡಕ್ಕೆ ಪ್ರಯಾಣ ಬೆಳೆಸಿದೆ. ದಿ.23ರಂದು ಉಳವಿಗೆ ಹೋಗಿ ಚಿನ್ಮಯಜ್ಞಾನಿ ಚನ್ನಬಸವಣ್ಣನವರ ದರ್ಶನ ಪಡೆದೆವು. ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಮಠದಲ್ಲಿ ಮೇ 25,26 ಮತ್ತು 27ರಂದು ನಾಲ್ಕನೆಯ ಶರಣೋತ್ಸವ ಜರುಗಿತು. ದಿ.27ರಂದು ದ್ವಿತೀಯ ಮಹಿಳಾ ಜಗದ್ಗುರು ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಪೀಠಾರೋಹಣ ಮಾಡಿದರು.

ದಿ.2–6–2013ರಂದು ರಾಷ್ಟ್ರೀಯ ಬಸವ ದಳದ ಪ್ರಧಾನ ಸಂಘಟಕರಾದ ಶರಣ ವೀರೇಶ್‌ಕುಮಾರ್ ಅವರ ಮಗ ಶರಣ ವಿದ್ಯಾ ಪ್ರಭುವಿನ ವಿವಾಹ ಶರಣೆ. ಶ್ವೇತಾಳೊಡನೆ. ಮಂಡ್ಯ ಜಿಲ್ಲೆಯ ಮಳವಳ್ಳಿಯ ಅರುಣೋದಯ ಕಲ್ಯಾಣ ಮಂಟಪದಲ್ಲಿ ನಡೆದ ವಿವಾಹಕ್ಕೆ ವಿಪರೀತ ಜನರು ಸೇರಿದ್ದು ರಾಷ್ಟ್ರೀಯ ಬಸವ ದಳದ ವಿವಿಧ ಘಟಕಗಳವರು ಸಮಾವೇಶವಾಗಿದ್ದು ಒಂದು ಸಮ್ಮೇಳನದಂತೆಯೇ ಮದುವೆಯು ಭಾಸವಾಯಿತು. ಇದರಿಂದ ಎರಡನೆಯ ಸುತ್ತಿನ ಪ್ರವಾಸ ಮುಕ್ತಾಯವಾಯಿತು. ■

ಜೇವರಗಿಯ ಷಣ್ಮುಖ ಶಿವಯೋಗಿಗಳ ವಚನ

ಸತ್ತು ಹೋದವರೆಲ್ಲ ಸ್ವರ್ಗಪದಸ್ಥರೆ ? ಅಲ್ಲಲ್ಲ ; ಕೈದುವ ಪಿಡಿದವರೆಲ್ಲ ಮಹಾಕಲಿಗಳೆ? ಅಲ್ಲಲ್ಲ. ಲಿಂಗವ ಧರಿಸುವವರೆಲ್ಲ ಲಿಂಗಪ್ರಾಣಿಗಳೆ ? ಅಲ್ಲಲ್ಲ. ಅದೇನು ಕಾರಣವೆಂದಡೆ : ಕಪಿಯ ಕೈಯಲ್ಲಿ ರತ್ನವ ಕೊಟ್ಟಡೆ ಅದು ಹಣ್ಣೆಂದು ಕಡಿದು ನೋಡಿ, ಕಲ್ಲೆಂದು ಬೀಸಾಡುವುದಲ್ಲದೆ, ಆ ರತ್ನದ ದಿವ್ಯ ಬೆಳಗನರಿವುದೆ ಅಯ್ಯಾ ? ಇಂತೀ ದೃಷ್ಟದಂತೆ, ಮಡ್ಡಜೀವಿಗಳ ಕೈಯಲ್ಲಿ ದೊಡ್ಡ ಲಿಂಗವಿರ್ದಡೇನು ? ಆ ಲಿಂಗದಲ್ಲಿ ಮಹಾಘನ ಪರಮ ಕಳೆಯನರಿಯದ ಬಳಿಕ ಅದು ಒಡ್ಡು ಕಲ್ಲಿನಂತೆ ಕಂಡೆಯಾ, ಅಖಂಡೇಶ್ವರಾ.

ಬಸವ ಗಂಗೋತ್ರಿಯಲ್ಲಿ ಮೂರನೆಯ ಬಸವೋತ್ಸವ

ಬೆಂಗಳೂರು-ಮೈಸೂರು ಹೆದ್ದಾರಿಯ ಮೇಲೆ ಕುಂಬಳಗೋಡು ಗ್ರಾಮ ವ್ಯಾಪ್ತಿಗೆ ಸೇರಿದ ರಾಮೋಹಳ್ಳಿ ಕ್ರಾಸ್ ಮತ್ತು ಕುಂಬಳಗೋಡು ಮಧ್ಯೆ ಇರುವ ಆಶ್ರಮ ಬಸವ ಗಂಗೋತ್ರಿ ಪ್ರಶಾಂತವಾದ ಪರಿಸರದ ಮಧ್ಯೆ ಸೊಂಪಾಗಿ ಗಿಡಮರಗಳು ಬೆಳೆದ ಸುಂದರ ತಾಣ. ಇಲ್ಲಿ ಒಂದು ಅನಾಥಾಲಯ ಮತ್ತು ವೃದ್ಧಾಶ್ರಮಗಳು ನಡೆಯುತ್ತಲಿವೆ. ಈ ಪರಿಸರದ ಮಧ್ಯೆ ಇರುವ ಬಸವ ಮಂಟಪದಲ್ಲಿ ದೇವ(ಭಾನು)ವಾರ ದಿ.9-6-2013ರಂದು ಮೂರನೆಯ ಬಸವೋತ್ಸವವು ಸಾಂಗವಾಗಿ ನೆರವೇರಿತು. ಮೋಡ ಮುಚ್ಚಿದ್ದರಿಂದ ತೀವ್ರವಾದ ಬಿಸಿಲು ಇರಲಿಲ್ಲ. ಪ್ರಶಾಂತವಾಗಿ ಆಹ್ಲಾದಕರವಾಗಿ ಬೀಸುವ ತಂಗಾಳಿಯ ಮಧ್ಯೆ ಬಸವೋತ್ಸವ ಮತ್ತು 111ಅಡಿ ಎತ್ತರದ ಬಸವ ಮೂರ್ತಿಯ ಕೆಲಸಕ್ಕೆ ಚಾಲನೆ ದೊರಕಿತು.

ಚಿನ್ಮಯಜ್ಞಾನಿ ಚನ್ನಬಸವಣ್ಣನವರ ಜ್ಞಾನಪೀಠದ ಆರೋಹಣ ಮಾಡಲಿದ್ದ ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮಿಗಳು ಬಸವೇಶ್ವರ ಪೂಜಾವ್ರತವನ್ನು ನೆರವೇರಿಸಿದರು. ಶರಣ.ಡಾ॥ ಸಿ. ಸೋಮಶೇಖರ್, ಐ.ಎ.ಎಸ್. ಅಬಕಾರಿ ಆಯುಕ್ತರು, ಬಸವ ಧ್ವಜಾರೋಹಣವನ್ನು ನೆರವೇರಿಸಿದರು. "ಪೂಜ್ಯ ಶ್ರೀ ಮಾತಾಜಿಯವರು ಶಾಲೆ-ಕಾಲೇಜುಗಳನ್ನು ತೆಗೆಯುವುದಕ್ಕೆ ಮನಸ್ಸು ಮಾಡದೆ ಧರ್ಮಪ್ರಚಾರ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಅಪ್ರತಿಮ ಕಾರ್ಯ ಮಾಡಿದ್ದಾರೆ. ನಾನು ಕಾಲೇಜು ವಿದ್ಯಾಭ್ಯಾಸದಲ್ಲಿ ಇರುವಾಗಲೇ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳವರ, ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಪ್ರವಚನ ಪ್ರಭಾವಕ್ಕೆ ಒಳಗಾದೆ. ಅವರ ಪ್ರವಚನಗಳು ಸ್ಫೂರ್ತಿಯನ್ನು, ಜೀವನೋತ್ಸಾಹವನ್ನು ತುಂಬಿದವು. ಸಾಮಾನ್ಯವಾಗಿ ಮಠಾಧೀಶರು ತಮ್ಮ ಗದ್ದುಗೆ, ಮಠಗಳ ಸಾಮ್ರಾಜ್ಯವನ್ನು ವಿಸ್ತರಿಸಿದರೆ ಪೂಜ್ಯ ಮಾತಾಜಿ ಬಸವ ಭಕ್ತಿಯ ಸಾಮ್ರಾಜ್ಯವನ್ನು ವಿಸ್ತರಿಸುತ್ತಿದ್ದಾರೆ. ಆಡಂಬರ, ಅಡ್ಡ ಪಲ್ಲಕ್ಕಿ, ವೈಭವಕ್ಕೆ ಮರುಳಾಗದೆ ಸರಳತನದಿಂದ ಒಬ್ಬ ಆದರ್ಶಗುರುವಾಗಿದ್ದಾರೆ. ಬಸವ ಕಲ್ಯಾಣದಲ್ಲಿ ಮಾಡಿರುವ ಕಾರ್ಯ ಅತ್ಯದ್ಭುತವಾಗಿದೆ. ಗುರು ಬಸವಣ್ಣನವರ ಭವ್ಯ ಪುತ್ಥಳಿ ಜೀವಂತವಾಗಿ ಗುರು ಬಸವಣ್ಣನವರು ಕುಳಿತಂತಿದೆ. ಅವರು ಮಾಡುತ್ತಿರುವ ಕಾರ್ಯಕ್ಕೆ ಎಷ್ಟು ದೇಣಿಗೆ ಕೊಟ್ಟರೂ ಕಡಿಮೆಯೇ !" ಎಂದು ಪ್ರಶಂಸಿಸಿದರು.

ಕುಂಬಳಗೋಡು ಬರುವ ಯಶವಂತಪುರ ವಿಧಾನಸಭಾ ಕ್ಷೇತ್ರದ ನೂತನ ಶಾಸಕರಾದ ಶರಣ. ಎಸ್.ಟಿ.ಸೋಮಶೇಖರ್ ಕಾರ್ಯಕ್ರಮವನ್ನು ದೀಪವನ್ನು ಹಚ್ಚಿ ಉದ್ಘಾಟಿಸಿದರು. ರಾಜರಾಜೇಶ್ವರಿ ಆಸ್ಪತ್ರೆಯ ಪ್ರಾಧ್ಯಾಪಕರಾದ ಡಾ॥ ಮಮತಾ.ಬಿ.ಪಾಟೀಲ್ ಅವರನ್ನು ಸತ್ಕರಿಸಲಾಯಿತು. ಅಂಧರು, ಅಂಗವಿಕಲರೂ ಆಗಿಯೂ ಸಹ 'ಸಮರ್ಥನಂ ಚಾರಿಟಬಲ್ ಟ್ರಸ್ಟ್' ಎಂಬ ಸಂಸ್ಥೆಯ ಮೂಲಕ ನೂರಾರು ಅಂಗವಿಕಲರಿಗೆ ಆಶ್ರಯ ನೀಡಿರುವ ಬೈಲಹೊಂಗಲದ ಶರಣ. ಮಹಾಂತೇಶ ಕಿವುಡಸಣ್ಣನ್ನವರು ಮತ್ತು ಬಸವ ಕಲ್ಯಾಣದಲ್ಲಿ 108ಅಡಿ ಎತ್ತರದ ಪುತ್ಥಳಿ ನಿರ್ಮಿಸಿದ ಶಿಲ್ಪಿಗಳಾದ ಶರಣ. ಕೆ.ಶ್ರೀಧರ ಮೂರ್ತಿಯವರನ್ನು ಸತ್ಕರಿಸಲಾಯಿತು. ರಾಜಕೀಯ ಧುರೀಣರಾದ ಬಿ.ಬಿ.ಎಂ.ಪಿ ಸದಸ್ಯೆ ಯಶೋದಮ್ಮ ಕೃಷ್ಣಪ್ಪ, ಕುಂಬಳಗೋಡಿನ ಮುಖಂಡರಾದ ಶರಣ. ನರಸೇಗೌಡರು, ಶರಣ.ಗೋಪಾಲಕೃಷ್ಣ, ಶರಣ. ನರಸಿಂಹಮೂರ್ತಿ ಅವರನ್ನು ಸತ್ಕರಿಸಲಾಯಿತು.

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರು ಮೊದಲು ಪೀಠಾರೋಹಣ ಮಾಡಿದರು. ನಂತರ ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮಿಗಳು ಪೀಠಾರೋಹಣ ಮಾಡಿದರು. ಭಕ್ತರು ಪೂಜ್ಯರಿಗೆ ಮಾಲಾರ್ಪಣೆ ಮಾಡಿ ಅಭಿನಂದಿಸಿದರು. ಪೂಜ್ಯರು ಪೀಠಾರೋಹಣ ಸಂದೇಶ ನೀಡಿದರು. ನಂತರ ಮದ್ದೂರಿನ ಶಿವು ಅವರು ವಾದ್ಯ ಸಹಿತವಾಗಿ ಹಾಡಿ ಗುರುಗಳಿಗೆ ಭಕ್ತಿಪೂರ್ವಕವಾಗಿ ನುಡಿ ಕಾಣಿಕೆ ಸಮರ್ಪಿಸಿದರು. 111 ಅಡಿ ಪುತ್ಥಳಿ ಆಗುವ ಸ್ಥಳದಲ್ಲಿ ಧ್ವಜ ಸ್ತಂಭವನ್ನು ನೆಟ್ಟು ಪೂಜ್ಯ ಮಾತಾಜಿ ಗುದ್ದಲಿಯಿಂದ 3 ಬಾರಿ ಅಗೆದು ನಿರ್ಮಾಣ ಕಾರ್ಯಕ್ಕೆ ಚಾಲನೆ ನೀಡಿದರು. ■

ಬಸವ ವಚನಾಮೃತ

- ಮಾತಾಜಿ

1189. ಪ್ರಜ್ಞೆಯೇ ಎಲ್ಲಕ್ಕೂ ಆಧಾರ

ಅರಿವಿಲ್ಲದ ಕಾಯವುಂಟೆ? ಅರಿವಿಲ್ಲದ ಪ್ರಾಣವುಂಟೆ
ಅರಿವಿಲ್ಲದ ನಿಲವುಂಟೆ ? ಭಾವವಿಲ್ಲದ ಭಕ್ತಿಯುಂಟೆ ?
ಲಿಂಗದೇವಾ, ನೀವು ಪರಿಪೂರ್ಣರಾಗಿಪ್ಪಿರಿ;
ಅವಗುಣಕ್ಕೆ ತೆರಹಿಲ್ಲ.

ವ್ಯಕ್ತಿಯಲ್ಲಿ ಅತಿ ಮುಖ್ಯವಾದುದು ಪ್ರಜ್ಞೆ (consciousness) ದೇಹದಲ್ಲಿ ನೆಲೆಸಿರುವ ಪ್ರಜ್ಞೆಯಿಂದಲೇ ಎಲ್ಲ ಚಟುವಟಿಕೆ ನಡೆಯುತ್ತವೆ. ಅರಿವು ಎನ್ನುವ ಪದವನ್ನು ಜ್ಞಾನ ಎಂಬ ಅರ್ಥದಲ್ಲಿ ಬಳಸಲಾಗುವುದಾದರೂ (ಉದಾ: ಅರಿವೇ ಗುರು) ಇಲ್ಲಿ ಪ್ರಜ್ಞೆ ಎಂಬ ಅರ್ಥದಲ್ಲಿ ಬಳಸಲಾಗಿದೆ. ಪ್ರಜ್ಞೆಯಿಲ್ಲದೆ ಶರೀರವು ಕೆಲಸ ಮಾಡದೆ ನಿಷ್ಕ್ರಿಯವಾಗಿರುವುದು. ಪ್ರಜ್ಞೆಯಿಲ್ಲದೆ ಪ್ರಾಣವು ಜಡಗಟ್ಟುವುದು, ಸ್ಥಗಿತಗೊಳ್ಳುವುದು. ಭಾವ ಸಂಪತ್ತಿಲ್ಲದೆ ಭಕ್ತಿ ಹೇಗೆ ಇರದೋ ಹಾಗೆ ಪ್ರಜ್ಞೆ ಇಲ್ಲದೆ ವ್ಯಕ್ತಿತ್ವವಿಲ್ಲ. ಲಿಂಗದೇವಾ, ನೀನು ಪರಿಪೂರ್ಣ ಆತ್ಮವಾಗಿದ್ದೀಯ. ನಿನ್ನಲ್ಲಿ ಕುಂದುಕೊರತೆಗಳಿಲ್ಲ. ಹಾಗೆಂದು ನನ್ನಲ್ಲಿ ಅವಗುಣವನ್ನು ಹುಡುಕಲು ಹೋಗಬೇಡ. ಮಾನವ ದೇಹಿಯಾದ ನನ್ನಲ್ಲಿ ಅವಗುಣಗಳು ದಟ್ಟವಾಗಿ ಇರಬಹುದು.

1190. ಲಿಂಗೈಕ್ಯದ ಅನುಭವ

ಅರಿದರಿದು ಎನಗಿಂದು ಕಣ್ಗೆ ಮಂಗಳವಾಯಿತ್ತು
ಒಂದಹುದು ಒಂದಾಗದೆಂಬ ಭ್ರಮೆಯವನಲ್ಲ ;
ಬೇಕು ಬೇಡೆಂಬ ಜಂಜಡದವನಲ್ಲ;
ಎಡೆವರಿಯದ ನೋಟ, ನುಡಿಯ ಸಡಗರವರತು
ಎಡೆಯಾಟ ಕೋಟಲೆಯ ಕಳೆಯಬಂದನು
ನೋಡುವರ ಮನದ ಸುಖದ
ಸಾಗರನಿಧಿಯನೇನೆಂದುಪಮಿಸುವೆನು ?
ಎನ್ನ ಉಭಯ ಕರ್ಮವ ಕಳೆದು ತನ್ನೊಳಗೆ ಇಂಬಿಟ್ಟುಕೊಳಬಂದನು
ಲಿಂಗದೇವ, ಕೃಪಾಮೂರ್ತಿ.

ಗುರು ಬಸವಣ್ಣನವರು ದಿವ್ಯಾನುಭವದಲ್ಲಿ ಮೈಮರೆತು ಕಾಯ ಲಿಂಗೈಕ್ಯರಾಗುವುದನ್ನು ಚಿತ್ರಿಸುವ ಮಹತ್ವಪೂರ್ಣ ವಚನವಿದು. ಯೋಗಶಕ್ತಿಯಿಂದ ಲಿಂಗೈಕ್ಯರಾಗುವ ಅನುಭವ ವಿವರಿಸುವ ಕೆಲವೇ ವಚನಗಳಲ್ಲಿ ಇದೂ ಒಂದು. (ಇನ್ನಿತರ ವಚನಗಳು-ಭಕ್ತಿ ಎಂಬ ಪೃಥ್ವಿಯ ಮೇಲೆ (ಬ.ವ.ದೀ.524), ಧರೆಯಾಕಾಶದ ನಡುವೆ ಒಂದು ಮಾಮರ ಹುಟ್ಟಿತ್ತು. (ಬ.ವ.ದೀ 1377) ಪ್ರಕಾಶ ಸ್ವರೂಪನಾದ ದೇವನು ಬೆಳಕಿನ ರೂಪದಲ್ಲಿ ಅವತೀರ್ಣಗೊಳ್ಳುವನು. ಹಿಂದೆ ಸಾಕ್ಷಾತ್ಕಾರವಾದಾಗಲೊಮ್ಮೆ ಲಿಂಗದೇವನ ಅನುಗ್ರಹ ಬೆಳಕಿನ ರೂಪದಲ್ಲಿ ಇಳಿದುಬಂದಿತ್ತು. ಈಗ ಅದು ಬಸವ ಚೈತನ್ಯವನ್ನು ಅಡಗಿಸಿಕೊಳ್ಳಲು, ತೊಟ್ಟು ಬಿಟ್ಟು ಕಳಚಿ ಬೀಳಲಿರುವ ಹಣ್ಣನ್ನು ಎತ್ತಿಕೊಳ್ಳಲು ಇಳಿದು ಬರುತ್ತಲಿದೆ.

ಅರಿದರಿದು-ಜ್ಞಾನದ ಪ್ರಭೆಯನ್ನುಟ್ಟಿರುವ ಎನ್ನ ಕಣ್ಗೆ ಈಗ ಮಂಗಳವಾದ ಅನುಭವವಾಗುತ್ತಿದೆ. ಈಗ ನನ್ನ ಮನಸ್ಸು ಎಲ್ಲ ಭ್ರಮೆಗಳನ್ನು ದಾಟ ನಿಂತಿದೆ. ಲಿಂಗದೇವನೊಡನೆ ಒಂದಾಗುವೆನೋ ಇಲ್ಲವೋ ಎನ್ನುವ ಭ್ರಮೆ ಅಳಿದಿದೆ. ಬೇಕು ಬೇಡ ಎಂಬ ಜಂಜಡವಳಿದಿದೆ. ನೋಟವು ಇಷ್ಟಲಿಂಗದಲ್ಲಿ ಸ್ಥಿರವಾಗಿ ಅತ್ತಿತ್ತ ಹರಿಯದೆ ನಿಂತಿದೆ. ಮಾತಿನ ಸಡಗರವೂ ನಿಂತು ಶಬ್ದ ಮುಗ್ಧತೆ ಪ್ರಾಪ್ತವಾಗುತ್ತಿದೆ. ಇದೆಲ್ಲವೂ ಲಿಂಗದೇವನ ಲೀಲಾವಿಲಾಸ. ನನ್ನ ಬದುಕಿನಲ್ಲಿ ಹೊಯ್ದಾಟ, ಕೋಟಲೆ ಎಲ್ಲ ನಿಂತು ಹೋಗುವಂತೆ ದೇವನು ಮಾಡುತ್ತಿದ್ದಾನೆ. ನೋಡುತ್ತ

ನೋಡುತ್ತ ನನ್ನ ಮನವು ಆನಂದತುಂದಿಲವಾಗಿದೆ. ದೇವನು ಸುಖದ ಸಾಗರ ನಿಧಿ. ಅವನನ್ನು ಏತಕ್ಕೂ ಹೋಲಿಸಲಾಗದು. ಮಾನವ ದೇಹವನ್ನು ಹೊತ್ತು ಬಂದ ನನ್ನ ಕರ್ಮವ ಕಳೆದು ಕೆಲವೇ ಕ್ಷಣಗಳಲ್ಲಿ ನನ್ನನ್ನು ಆವರಿಸಿಕೊಂಡು ತನ್ನಲ್ಲಿ ಅಡಗಿಸಿಕೊಳ್ಳಲಿರುವನು. ಲಿಂಗದೇವನು ಪರಮ ದಯಾಳು, ಕೃಪಾಮೂರ್ತಿ. ಧರ್ಮಪಿತ ಬಸವಣ್ಣನವರು ಲಿಂಗೈಕ್ಯರಾಗುವ–ಆತ್ಮವು ಬಿಡುಗಡೆಯಾಗಿ ಪರಮಾತ್ಮನಲ್ಲಿ ಲೀನವಾಗುವ ಪ್ರಕ್ರಿಯೆ, ಕಡೆಯ ಕ್ಷಣದವರೆಗೂ ತಮ್ಮ ಅನುಭವವನ್ನು ದಾಖಲಿಸಿರುವುದು ಗಮನಾರ್ಹ.

1191. ಶರಣೆಂದು ಶುದ್ಧನಾದೆ.

ಪುಣ್ಯವೆಂದರಿಯೆ, ಪಾಪವೆಂದರಿಯೆ
ಸ್ವರ್ಗವೆಂದರಿಯೆ, ನರಕವೆಂದರಿಯೆ
ಹರಹರ ಮಹಾದೇವ ಶಿವಶರಣೆಂದು ಶುದ್ಧ ನೋಡಯ್ಯಾ
ಹರಹರ ಮಹಾದೇವ ಶಿವಶರಣೆಂದು ಧನ್ಯ ನೋಡಯ್ಯಾ
ಲಿಂಗದೇವಯ್ಯಾ, ನಿಮ್ಮನರ್ಚಿಸಿ, ಪೂಜಿಸಿ, ನಿಶ್ಚಿಂತನಾದೆ.

ಸಾಧಕನು ಸಾಧನೆಯ ಹಾದಿಯಲ್ಲಿ ಮುಂದುವರಿಯುವಾಗ ಪಾಪ–ಪುಣ್ಯಗಳಿಗೆ ಅತೀತನಾಗುವನು. ಅವನಲ್ಲಿ ಇರುವುದು. ಕೇವಲ ಶರಣಾಗತಿ. ಅವನಲ್ಲಿ ಪುಣ್ಯದ ಆಸೆ ಇರದು, ಪಾಪದ ಭಯವೂ ಇರದು. ಸ್ವರ್ಗದ ಆಸೆಯೂ ಇರದು. ನರಕದ ಭಯವೂ ಇರದು. ಇರುವುದು ಕೇವಲ ದೇವರ ಮೇಲಿನ ಪ್ರೀತಿ.

ಒಬ್ಬ ಸೂಫಿ ಮಹಿಳೆಯ ಕಥೆ ಬರುತ್ತದೆ. ಆಕೆ ಸದಾ ಒಂದು ಕೈಯಲ್ಲಿ ಬೆಂಕಿಯನ್ನು ಇನ್ನೊಂದು ಕೈಯಲ್ಲಿ ನೀರನ್ನು ಹಿಡಿದುಕೊಂಡಿರುತ್ತಿದ್ದಳಂತೆ. ಕೇಳಿದವರಿಗೆ ಹೀಗೆ ಹೇಳುತ್ತಿದ್ದಳಂತೆ, "ಸ್ವರ್ಗದ ಆಸೆಗೆ ನೀರು ಸುರಿಯುವೆ. ನರಕದ ಭಯಕ್ಕೆ ಬೆಂಕಿ ಹಚ್ಚುವೆ." ಸಾಮಾನ್ಯ ಜನರು ಸ್ವರ್ಗದ ಆಸೆಯಿಂದ ನರಕದ ಭಯದಿಂದ ಒಳ್ಳೆಯವರಾಗಿ ಇರಲು ಯತ್ನಿಸುವರು. ನಿಜ ಶರಣನು ದೇವನಿಗಾಗಿ ದೇವನನ್ನು ಪ್ರೀತಿಸುವನು. ದೇವನ ಬಗ್ಗೆ ಭಯವಿರಬಾರದು, ಪ್ರೀತಿಸಹಿತವಾದ ಭಕ್ತಿ ಇರಬೇಕು.

ಸೃಷ್ಟಿಕರ್ತದೇವನ ಬಗ್ಗೆ ಪ್ರೀತಿ ಇದ್ದರೆ ಆಗ ಅನ್ಯ ದೇವತೆಗಳನ್ನು ಆರಾಧಿಸುವ ಬಹುದೇವತೋಪಾಸನೆ ಒಗ್ಗುವುದಿಲ್ಲ. ಪತಿವ್ರತಾ ಸ್ತ್ರೀಯ ಪತಿ ಪ್ರೇಮದಂತೆ ದೇವನಿಷ್ಠೆ ಇರುವುದು. ಸ್ವರ್ಗದ ಆಸೆ ನರಕದ ಭಯ ಇರುವುದಿಲ್ಲ. ದೇವನಿಗೆ ಶರಣಾಗಿ ಶುದ್ಧನಾಗುವನು, ಧನ್ಯತಾ ಭಾವವನ್ನು ಹೊಂದುವನು. "ನಾನು ಎಲ್ಲರಿಗಿಂತಲೂ ಮಿಗಿಲಾಗಿ ಸೃಷ್ಟಿಗೊಡೆಯನನ್ನು ಆರಾಧಿಸುತ್ತಿದ್ದೇನೆ" ಎಂದು ಹೆಮ್ಮೆ ಪಡುವನು.

ಲಿಂಗದೇವನನ್ನು ಅರ್ಚಿಸಿ, ಪೂಜಿಸಿ, ನಿಶ್ಚಿಂತ ಮನೋಭಾವ ಹೊಂದುವನು. ಅರ್ಚಿಸಿ ಎಂದರೆ ಮಾನಸಿಕವಾಗಿ ಆರಾಧಿಸುವುದು, ಪೂಜಿಸಿ ಎಂದರೆ ವಿವಿಧ ವಸ್ತುಗಳನ್ನು ಅರ್ಪಿಸಿ ಉಪಾಸಿಸುವುದು. ಮಾನಸಿಕವಾಗಿ ಭಕ್ತಿ ಇದ್ದೂ ಹೊರಗಿನ ಕ್ರಿಯೆಯಿಂದ ಅದನ್ನು ವ್ಯಕ್ತಪಡಿಸದೆ ಇದ್ದರೆ ಅದು ಸಿಪ್ಪೆಯಿಲ್ಲದ ಅಕ್ಕಿಯಂತೆ ಬಿತ್ತಿದರೆ ಬೆಳೆಯದು. ಬರೀ ಹೊರಗಿನ ಕ್ರಿಯೆ ಇದ್ದು ಒಳಗೆ ಭಕ್ತಿ ಇಲ್ಲದಿದ್ದರೆ ಅದು ಅಕ್ಕಿಯ ಕಾಳಿಲ್ಲದ ಸಿಪ್ಪೆಯಂತೆ ಆಗಲೂ ಬಿತ್ತಿದರೆ ಬೆಳೆಯದು. ಒಳಗಿನ ಭಕ್ತಿ ಹೊರಗಿನ ಪೂಜೆ ಎರಡೂ ಅವಶ್ಯ

1192. ಲಿಂಗಭ್ರಾಂತತೆ

ಅರತುದಯ್ಯ ಅಂಗಗುಣ, ಒರತುದಯ್ಯಾ ಭಕ್ತಿರಸ
ಆವರಿಸಿತ್ತಯ್ಯಾ ಲಿಂಗವಂಗವನು.
ಏನೆಂದರಿಯೆನಯ್ಯಾ ಲೋಕಲೌಕಿಕವ
ಲಿಂಗಭ್ರಾಂತನಾದೆನಯ್ಯಾ ಲಿಂಗದೇವಯ್ಯಾ
ನಿಮ್ಮ ಕರುಣವೆನ್ನನೆಡೆಗೊಂಡಿತ್ತಾಗಿ.

ದೇವನ ಕಾರುಣ್ಯದ ಪ್ರಭಾವ ಅಪೂರ್ವ. ವ್ಯಕ್ತಿತ್ವದಲ್ಲಿ ಅದ್ಭುತ ಬದಲಾವಣೆಯನ್ನೂ ತರುತ್ತದೆ. ಕೊಡದಲ್ಲಿ ನೀರು ಒಳಹೋಗುತ್ತಲೇ ಒಳಗಿನ ಗಾಳಿ ಹೊರಹೋಗುವಂತೆ, ಭಕ್ತಿರಸ ಒಳಗೆ ಪ್ರವೇಶಮಾಡುತ್ತಲೇ ಅಂಗಗುಣಗಳು ಬತ್ತಿ ಹೋಗುತ್ತವೆ. ಲಿಂಗದೇವನು ಭಕ್ತನ ಅಂಗವನ್ನು ಆವರಿಸಿಕೊಳ್ಳುವನು. ಲೋಕದ ವ್ಯವಹಾರವಾಗಲಿ, ಲೌಕಿಕ ಪ್ರಜ್ಞೆಯಾಗಲಿ ಉಳಿಯುವುದಿಲ್ಲ. ಒಂದು ವಿಶಿಷ್ಟ ಮನಃಸ್ಥಿತಿ ಅಳವಟ್ಟು ಭಕ್ತನು ಲಿಂಗಭ್ರಾಂತನಾಗುವನು. ಲಿಂಗದೇವನ ಕಾರುಣ್ಯ ಹರಿದು ಬರುತ್ತಲೇ ಸರ್ವಾಂಗವೂ ದೈವೀಕರಣಗೊಳ್ಳುವುದು.

1193. ಆಡಂಬರದ ಭಕ್ತಿ ಸಲ್ಲದು

ಬಣ್ಣವನಿಟ್ಟು ಮೆರೆವ ಅಣ್ಣನ ಭಕ್ತಿ
ಸುಣ್ಣಕಲ್ಲ ಕಟ್ಟಿ ಮಡುವ ಬಿದ್ದಂತೆ ಆಯಿತ್ತು.
ತನ್ನ ಬಣ್ಣ ತನ್ನ ಸುಡುವುದು;
ತನ್ನ ಸುಡದ ಹಾಗೆ ನೆನೆಯಾ, ಲಿಂಗದೇವನ.

ಆಡಂಬರದ ಭಕ್ತಿಯನ್ನು ಮಾಡುವ ಅಣ್ಣನ ಭಕ್ತಿ ಸುಣ್ಣದ ಕಲ್ಲನ್ನು ಮಡಿಲಲ್ಲಿ ಕಟ್ಟಿಕೊಂಡು ಮಡುವಿನಲ್ಲಿ ಬಿದ್ದಂತೆ ಆಗುವುದು. ತನ್ನ ಆಡಂಬರ ತನ್ನನ್ನೇ ಸುಡುವುದು. ತನ್ನ ಭಕ್ತಿಯೇ ತನಗೆ ವಿಪತ್ಕಾರಿಯಾಗದ ಹಾಗೆ ಲಿಂಗದೇವನನ್ನು ನೆನೆಯಬೇಕು. ಒಂದು ಮದುವೆ ನಡೆಯಿತು. ವರನ ಹತ್ತಿರದ ಬಂಧುಗಳು ಸೇರಿ ಹಣ ಕೂಡಿಸಿ ಮದುವೆ ಮಾಡಿದರು. ಆತ ತನ್ನ ಶಕ್ತಿ ಮೀರಿ ಖರ್ಚು ಮಾಡಿ ಮನೆ ಕಟ್ಟಿಸಿದನಂತೆ, ತಾನು ಯಾರಿಗೇನೂ ಕಮ್ಮಿ ಇಲ್ಲ ಎಂದು ತೋರಿಸಲು ಗೃಹಪ್ರವೇಶಕ್ಕೆ ಸಾಲ ಮಾಡಿ ಖರ್ಚು ಮಾಡಿದನಂತೆ. ಬರಿಗೈ ಆದ್ದರಿಂದ ಮದುವೆಗೆ ಹಣ ಇಲ್ಲವಾಯಿತಂತೆ, ಹತ್ತಿರದ ಬಂಧುಗಳು ಖರ್ಚುಮಾಡಿ ಮದುವೆ ಮಾಡಿಸಿದರಂತೆ,

ಮನೆ ಕಟ್ಟಿಸಿದ್ದೇನೋ ಸರಿ. ಈ ಕಾಲದಲ್ಲಿ ಹಾಕಿಕೊಂಡ ಲೆಕ್ಕಾಚಾರಕ್ಕಿಂತ ಹೆಚ್ಚಿಗೆ ಖರ್ಚಾಗುತ್ತದೆ. ಆಡಂಬರದ ಗೃಹಪ್ರವೇಶ ಬೇಕಿತ್ತೆ? ಅದೂ ಸಾಲ ಮಾಡಿ, ತಮ್ಮ ಬಂಧುಗಳ ಎದುರು ವೈಭವ ಪ್ರದರ್ಶನ ಮಾಡಲು ! ಇದನ್ನೇ ಧರ್ಮಪಿತರು ಹೇಳಿರುವುದು, "ತನ್ನ ಬಣ್ಣ (ಆಡಂಬರ) ತನ್ನ ಸುಡುವುದು" ಎಂಬುದಾಗಿ. ತನ್ನ ಆಡಂಬರವೇ ತನಗೆ ಮುಳುವು ತಾರದ ಹಾಗೆ ಭಕ್ತಿಯನ್ನು ಶ್ರದ್ಧಾಪೂರ್ವಕವಾಗಿ ಮಾಡಬೇಕು.

1194. ದೇವನೊಡನೆ ಮುನಿಸು

ಕೊಂಡುದಿಲ್ಲ ಕೊಟ್ಟುದಿಲ್ಲ. ಲಗ್ಗವಿಲ್ಲ ವಿಲಗ್ಗವಿಲ್ಲ
ನಮಗೆಯೂ ನಿಮಗೆಯೂ ಸಂಬಂಧವಿಲ್ಲ
ನಮಗೆಯೂ ನಿಮಗೆಯೂ ಭೇದಭಾವವಿಲ್ಲ
ಲಿಂಗದೇವಾ, ಇರು, ಇರದೆ ಮಾಣು.

ಸಾಧಕಾವಸ್ಥೆಯಲ್ಲಿ ಭಕ್ತನು ದೇವನೊಡನೆ ಮುನಿಸು ತಾಳುವನು, ಕೋಪಗೊಳ್ಳುವನು ಜಗಳವಾಡುವನು. ದರ್ಶನ ಪಡೆಯುವ ಹಂಬಲದಿಂದ ಸಾಧಕ ಚಟಪಡಿಸುವನು. ಆಗ ಏನೊಂದೂ ಅನುಭವ ಆಗದಿದ್ದಾಗ ಬಹಳ ಮುನಿಸು ಉಂಟಾಗುವುದು. ನಾನು ಮಾಡುವ ಭಕ್ತಿಯನ್ನು ಕೊಂಡುದಿಲ್ಲ. ಅಂದರೆ ಸ್ವೀಕರಿಸುವುದಿಲ್ಲ, ಕೊಟ್ಟುದಿಲ್ಲ ಅಂದರೆ ದಿವ್ಯಾನುಭವವನ್ನು ಕೊಟ್ಟುದಿಲ್ಲ. ನನಗೂ ನಿನಗೆ ಲಗ್ನ–ಹೊಂದಾಣಿಕೆ ಇಲ್ಲ. ವಿಲಗ್ಗ–ವಿಚ್ಛೇದನವೂ ಇಲ್ಲ; ನಮಗೆಯೂ ನಿಮಗೆಯೂ ಸಂಬಂಧವಿಲ್ಲ, ಹಾಗೆಂದ ಮಾತ್ರಕ್ಕೆ ಭಾವ ಭೇದವಿಲ್ಲ. ಲಿಂಗದೇವಾ, ನೀನು ಇದ್ದರೂ ಅಷ್ಟೆ. ಇರದೆ ದೂರವಾದರೂ ಅಷ್ಟೆ. ಇದು ತಾತ್ಕಾಲಿಕವಾದ ಮುನಿಸು ಮಾತ್ರ

1195. ಅಗೌರವಿಸುವುದು ಸಲ್ಲದು.

ದಾಸೀಪುತ್ರನಾಗಲಿ, ವೇಶ್ಯಾಪುತ್ರನಾಗಲಿ
ಶಿವದೀಕ್ಷೆಯಾದ ಬಳಿಕ ಸಾಕ್ಷಾತು ಶಿವನೆಂದು ವಂದಿಸಿ, ಪೂಜಿಸಿ
ಪಾದೋದಕ, ಪ್ರಸಾದವ ಕೊಂಬುದೆ ಯೋಗ್ಯ

ಹೀಗಲ್ಲದೆ ಉದಾಸೀನವ ಮಾಡಿ ಬಿಡುವವರಿಗೆ
ಪಂಚಮಹಾಪಾತಕ ನರಕ ಕಾಣಾ, ಲಿಂಗದೇವಾ.

ಗುರುಬಸವಣ್ಣನವರ ಧಾರ್ಮಿಕ ಸಮಾನತೆ ಅತ್ಯದ್ಭುತ. ಇಷ್ಟಲಿಂಗ ದೀಕ್ಷೆ ಪಡೆದ ಸದ್ಭಕ್ತರಲ್ಲಿ ಸಮಾನತೆ ಇರಬೇಕು. ಪರಸ್ಪರ ಸಹಪಂಕ್ತಿ ಭೋಜನ ಮಾಡಬೇಕು ; ಗುರು ಜಂಗಮರು ಪದೋದಕ ಪ್ರಸಾದವನ್ನು ನೀಡಿ ಭಕ್ತರನ್ನು ಸಮಾಜದ ಒಳಗೆ ತೆಗೆದುಕೊಳ್ಳಬೇಕು. ಹೆಣ್ಣು-ಗಂಡನ್ನು ಕೊಡುವ-ತೆಗೆದುಕೊಳ್ಳುವ ಕಾರ್ಯ ಮಾಡಬೇಕು. ಇದು ಸಾಮಾಜಿಕ ಸಮಾನತೆ, ಇನ್ನು ಧಾರ್ಮಿಕ ಸಮಾನತೆ ಎಂದರೆ ಒಬ್ಬ ವ್ಯಕ್ತಿ ಜಂಗಮದೀಕ್ಷೆ ಪಡೆದು ಜಂಗಮನಾದ ಮೇಲೆ ಅವನು ಹುಟ್ಟನಿಂದ ದಾಸೀ ಪುತ್ರನೇ ಇರಬಹುದು, ವೇಶ್ಯಾಪುತ್ರನೇ ಇರಬಹುದು. ಅವನ ಪೂರ್ವಾಶ್ರಮ ನೋಡಬಾರದು. ಜಂಗಮ ಲಾಂಛನ ನೋಡಿ ಗೌರವಿಸಿ, ಆತನಿಂದ ಪದೋದಕ-ಪ್ರಸಾದವನ್ನು ಪಡೆಯಬೇಕು. ಹಾಗೆ ಮಾಡದೆ ಅವನ ಪೂರ್ವಾಶ್ರಮ ಎಣಿಸಿ ಉದಾಸೀನ ಮಾಡುವವರಿಗೆ ಪಂಚಮಹಾಪಾತಕ ಮಾಡಿದವರಿಗೆ ಪ್ರಾಪ್ತಿಯಾಗುವ ನರಕ ಪ್ರಾಪ್ತಿಯಾಗುವುದು.

1196. ಹಿರಿತನ ಯಾವುದರಲ್ಲಿದೆ ?

ವೇದಶಾಸ್ತ್ರ ಗೀತ ಆಗಮಂಗಳನೋದಿದವರು ಹಿರಿಯರೆ ?
ಕವಿ, ಗಮಕಿ, ಗೀತ, ವಾದಿ, ವಾಗ್ಮಿಗಳು ಹಿರಿಯರೆ ?
ನಟನಿ, ಬಾಣಸಿಗ, ವಿಲಾಸಿ, ಸುವಿದ್ಯವ ಕಲಿತ
ಡೊಂಬನೇನು ಕಿರಿಯನೆ ?
ಹಿರಿಯತನವಾವುದೆಂದಡೆ : ಗುಣ ಜ್ಞಾನ ಆಚಾರ ಧರ್ಮ
ಲಿಂಗದೇವನ ಶರಣರು ಸಾಧಿಸಿದ ಸಾಧನೆಯೆ ಹಿರಿಯತನ

ವೇದಗಳನ್ನು, ತತ್ತ್ವಶಾಸ್ತ್ರ-ತರ್ಕಶಾಸ್ತ್ರದ ಗ್ರಂಥಗಳನ್ನು, ಭಗವದ್ಗೀತೆಯನ್ನು ಶೈವ ಶಾಸ್ತ್ರದ ಗ್ರಂಥಗಳಾದ ಆಗಮಗಳನ್ನು ಓದಿದವರು, ಕಂಠ ಪಾಠ ಮಾಡಿದವರು ಹಿರಿಯರೆ ? ಕಾವ್ಯ ರಚನೆ ಮಾಡುವ ಕವಿಗಳು, ಕಾವ್ಯಗಳನ್ನು ರಾಗವಾಗಿ ಹಾಡುವ ಗಮಕಿಗಳು, ಸುಶ್ರಾವ್ಯವಾಗಿ ಹಾಡುವವರು, ತರ್ಕಬದ್ಧವಾಗಿ ವಾದ ಮಾಡುವವರು, ಅಸ್ಖಲಿತವಾಗಿ ಮಾತನಾಡುವವರು ಹಿರಿಯರೆ ? ಉತ್ತಮ ಅಭಿನಯ, ಚೆನ್ನಾಗಿ ಅಡಿಗೆ ಮಾಡುವವರು, ಬಹುಬಗೆಯ ಅಲಂಕಾರ ಮಾಡಿಕೊಂಡು ಮೆರೆಯುವ ವಿಲಾಸಿಗಳು, , ಜಾದೂ ವಿದ್ಯೆ ಕಠಿಣತಮ ಪ್ರದರ್ಶನ ಮಾಡುವ ಡೊಂಬರೇನು ಕಿರಿಯರೆ?

ಇವಾವೂ ಹಿರಿಯತನ ತಂದು ಕೊಡುವಂಥವಲ್ಲ...... ವ್ಯಕ್ತಿತ್ವಕ್ಕೆ ಘನತೆಯನ್ನು ತಂದುಕೊಡುವ ಸಲ್ಲಕ್ಷಣಗಳೆಂದರೆ ಸದ್ಗುಣ, ಸುಜ್ಞಾನ, ಸದಾಚಾರ, ಧರ್ಮವಂತಿಕೆ, ಲಿಂಗದೇವನ ಶರಣರು ಇವನ್ನು ಅಳವಡಿಸಿಕೊಂಡು ಹಿರಿಯತನವನ್ನು ಸಾಧಿಸುವರು.

1197. ಶಾಸ್ತ್ರ ಪಾಠಕರು

ಬರಿಯ ಅನುಭವದಲ್ಲಿ ನಿರ್ವಾಣಿ ಎಂದರೆ
ವೇದಾಧ್ಯಾಯಿಗಳು ಮುಕ್ತರಲ್ಲ.
ಗಿಳಿಯೋದಿ ಅನಿಷ್ಟವ ಭುಂಜಿಸಿದಂತೆ
ಲಿಂಗದೇವನನೆತ್ತ ಬಲ್ಲರು, ಮಾಯಾತೊತ್ತುಗಳು ?

ಕೆಲವರು ತಮ್ಮ ಲೌಕಿಕ ಜೀವನದ ಸುದೀರ್ಘ ಅನುಭವವೇ ಬಹಳ ಶ್ರೇಷ್ಠವೆಂದು ಹೆಮ್ಮೆಯಿಂದ ಹೇಳಿಕೊಳ್ಳುವರು. ಅದನ್ನೇ ನಿರ್ವಾಣ (ಜೀವನ್ಮುಕ್ತ) ಸ್ಥಿತಿ ಎಂದು ಕೊಚ್ಚಿಕೊಳ್ಳುವರು. ಮತ್ತೆ ಕೆಲವರು ವೇದಗಳನ್ನು ಕಂಠಪಾಠ ಮಾಡಿ ಅದೇ ಶ್ರೇಷ್ಠ ಜ್ಞಾನವೆಂದು ಪ್ರತಿಪಾದಿಸುವರು. ವೇದಗಳು ಒಬ್ಬ ದೇವನನ್ನು ಕುರಿತು ಗಾಯತ್ರಿ ಮಂತ್ರದಲ್ಲಿ ಸ್ತುತಿಸುತ್ತವೆ. ಗಿಳಿಯು ಬಾಯಿಂದ ಶಾಸ್ತ್ರವಾಕ್ಯಗಳನ್ನು ಉಚ್ಚರಿಸಿ ನಂತರ ಪಂಜರದಲ್ಲಿ ಬಿದ್ದ ತನ್ನ ಮಲವನ್ನೇ

ಭುಂಜಿಸುವಂತೆ ವೇದಪಾಠಕರು ಏಕದೇವೋಪಾಸನೆಯ ಗಾಯತ್ರಿ ಮಂತ್ರ ಹೇಳಿ ಹಲವಾರು ದೇವತೆಗಳನ್ನು ಪೂಜಿಸುವರು. ಈ ಮಾಯಾ ತೊತ್ತುಗಳು ಲಿಂಗದೇವನ ಹಿರಿಮೆಯನ್ನು ಎತ್ತ ಬಲ್ಲರು?

1198. ಸಿದ್ಧರಾಮಯ್ಯನ ಬಾಲಿಶತನ

ಬಾಲರ ಭಾವದ ಭಾವವ ಕೆಡಿಸುವ ಅನುಭಾವ ಮಡಿವಾಳಯ್ಯ ಬಲ್ಲ.
ಬಾಲರಲ್ಲಿ ಅಜ್ಞಾನವಿದ್ದ ಕಾರಣ ಭಾವನೆಂಬ ನಾಮ ನಿಜವಾಯಿತ್ತು.
ಇದು ಕಾರಣ, ಸಿದ್ಧರಾಮಯ್ಯ ಜ್ಞಾನಿಯಾದಡೇನು
ಶರಣರ ಲಿಂಗಾಂಗಸಮರಸವರಿಯದ ನಿಮಿತ್ತ
ಬಾಲನೆಂದು ಲಿಂಗದೇವರು ತಂದರಯ್ಯ ಮಡಿವಾಳ ತಂದೆ !

ಮಕ್ಕಳಂತೆ ಬಾಲಿಶತನದಲ್ಲಿ ವಿಚಾರ ಮಾಡುವವರ ಅಪಕ್ವ ವಿಚಾರಧಾರೆಯನ್ನು ಕಳೆದು ಪರಿಪೂರ್ಣಗೊಳಿಸುವ ಅನುಭಾವವನ್ನು ಮಡಿವಾಳ ಮಾಚಿದೇವರು ಬಲ್ಲರು. ಅಜ್ಞಾನಿಗಳ ಭಾವ (ಅಕ್ಕನ ಗಂಡ) ಮಾಚಯ್ಯ. ಸಿದ್ಧರಾಮಯ್ಯನವರಲ್ಲಿ ಅಜ್ಞಾನವಿರುವ ಕಾರಣ ಅವರಿಗೆ ಮಾಚಿದೇವರು ಭಾವನ ಸಮಾನ. ಸಿದ್ಧರಾಮಯ್ಯನವರು ಜ್ಞಾನಿಗಳು ಇರಬಹುದು. ಆದರೆ ಅವರಿಗೆ ಲಿಂಗಾಂಗ ಸಾಮರಸ್ಯದ ಯೋಗದ ಬಗ್ಗೆ ಏನೇನೂ ಜ್ಞಾನವಿಲ್ಲ. ಅದನ್ನು ಕಲಿಸಲೆಂದೇ ಲಿಂಗದೇವನು ಅವರನ್ನು ಅನುಭವ ಮಂಟಪಕ್ಕೆ ಕರೆತಂದಿದ್ದಾನೆ ಮಾಚಿತಂದೆಯವರೆ !

1199. ಆಹ್ವಾನ ವಿಸರ್ಜನೆ ಸಲ್ಲ

ಆಹ್ವಾನವಿಲ್ಲ ಪ್ರಾಣಲಿಂಗವಾಗಿ ;
ವಿಸರ್ಜನವಿಲ್ಲ ಲಿಂಗ ನೆಲೆಗೊಂಡಿಪ್ಪುದಾಗಿ
ಇದು ಕಾರಣ-ಆಹ್ವಾನ ವಿಸರ್ಜನವಿಲ್ಲ, ಶರಣನ ಪರಿ ಬೇರೆ,
ಅಂಗಸಂಗವೇ ಲಿಂಗ, ಲಿಂಗಸಂಗವೇ ಮನ.
ಲಿಂಗದೇವನ ಶರಣ ಸುಯಿಧಾನಿ.

ವೈದಿಕ ಹಿಂದು ಧರ್ಮದಲ್ಲಿ ಹಲವಾರು ದೇವತೆಗಳ ಪೂಜೆ ರೂಢಿಯಲ್ಲಿ ಇರುವುದಲ್ಲದೆ ಆ ದೇವತೆಯನ್ನು ಪೂಜಿಸುವಾಗ ಅದನ್ನು ಆಹ್ವಾನಿಸಲಾಗುವುದು. ಪೂಜೆ ಮುಗಿದ ನಂತರ ವಿಸರ್ಜಿಸಲಾಗುವುದು. ಇದನ್ನು ಗುರು ಬಸವಣ್ಣ ಖಂಡಿಸುವರಲ್ಲದೆ ಇಷ್ಟಲಿಂಗಾರ್ಚನೆಯಲ್ಲಿ ಆಹ್ವಾನ-ವಿಸರ್ಜನೆಯನ್ನು ನಿಷೇಧಿಸಿದ್ದಾರೆ. ಇಷ್ಟಲಿಂಗವು ಎರಡು ಭಾಗಗಳಿಂದ ಕೂಡಿದೆ. ಒಂದು, ಗೋಲಾಕಾರದ ಕಂಥೆಯ ಕವಚ, ಇನ್ನೊಂದು ಒಳಗೆ ಹುದುಗಿ ಇಟ್ಟಿರುವ ಪಂಚಸೂತ್ರ ಲಿಂಗ. ಕಂಥೆ ಬ್ರಹ್ಮಾಂಡದ ಆಕಾರದಲ್ಲಿದ್ದು ಲಿಂಗದೇವನ ಸಂಕೇತ. ಹುಟ್ಟುಲಿಂಗವು ದೇಹದ ಆಕಾರದಲ್ಲಿದ್ದು ಆತ್ಮ(ಪ್ರಾಣಲಿಂಗ)ದ ಸಂಕೇತ ಆಹ್ವಾನಿಸುವುದು ಹೇಗೆ ಸಾಧ್ಯ ? ಉಪಾಸ್ಯ ವಸ್ತು ಸ್ವತಃ ಪ್ರಾಣಲಿಂಗವೇ ಆಗಿದೆ. ಇನ್ನು ವಿಸರ್ಜನೆ ಹೇಗೆ ಸಾಧ್ಯ? ಉಪಾಸ್ಯ ವಸ್ತು ಜಗತ್ತಿನಲ್ಲೆಲ್ಲ ತುಂಬಿ ತುಳುಕುತ್ತಲಿದೆ. ಆದ್ದರಿಂದ ಇಷ್ಟಲಿಂಗಾರ್ಚನೆಯಲ್ಲಿ ಕರೆಯುವುದು -ಕಳಿಸುವುದು ಇಲ್ಲವೇ ಇಲ್ಲ. ಅಂಗದ ಮೇಲೆ ಲಿಂಗಧಾರಣೆ, ಮನದ ಮೇಲೆ ಲಿಂಗದೇವನ ಪ್ರತಿಷ್ಠಾಪನೆ. ಹೀಗಾಗಿ ಲಿಂಗದೇವನ ಶರಣರು ಪರಮ ಸಂತೃಪ್ತ ಸುಯಿಧಾನಿಗಳು.

1200. ಆಹ್ವಾನ ವಿಸರ್ಜನೆ ಎಂಬ ಜಡತೆ ಇಲ್ಲ

ಆಹ್ವಾನಿಸಿ ಕರೆವಲ್ಲಿ ಎಲ್ಲಿರ್ದನೋ,
ಈರೇಳು ಲೋಕವನೊಳಕೊಂಡಿಪ್ಪ ದಿವ್ಯವಸ್ತು ?
ಮತ್ತೆ ವಿಸರ್ಜಿಸಿ ಬಿಡುವಾಗ ಎಲ್ಲಿರ್ಪನೊ,
ಮುಳ್ಳೂರ ತೆರಹಿಲ್ಲದಿಪ್ಪ ಅಖಂಡ ವಸ್ತು ?
ಬರಿಯ ಮಾತಿನ ಬಳಕೆಯ ತೂತಜ್ಞಾನವ ಬಿಟ್ಟು
ನೆಟ್ಟನೆ ತನ್ನ ಕರಸ್ಥಲದೊಳಗಿರುತಿಪ್ಪ ಇಷ್ಟಲಿಂಗವ ದೃಷ್ಟಿಸಿ ನೋಡಲು

ಅಲ್ಲಿ ತನ್ನ ಮನಕ್ಕೆ ಮನ ಸಂಧಾನವಾದ ದಿವ್ಯ ನಿಶ್ಚಯವೊದಗಿ
ಆ ದಿವ್ಯ ನಿಶ್ಚಯದಿಂದ ಕುಳವಡಗಿ ಅದ್ವೈತವಪ್ಪುದು
ಇದು ಕಾರಣ ನಮ್ಮ ಲಿಂಗದೇವನ ಶರಣರು
ಆಹ್ವಾನ-ವಿಸರ್ಜನ ಎಂಬ ಉಭಯ ಜಡತೆಯ ಬಿಟ್ಟು
ತಮ್ಮ ತಮ್ಮ ಕರಸ್ಥಲದಲ್ಲಿ ನಿಶ್ಚಯಿಸಿದರಾಗಿ
ಸ್ವಯಲಿಂಗವಾದರು ಕಾಣಿಭೋ.

ಹದಿನಾಲ್ಕು ಲೋಕಗಳನ್ನು ವ್ಯಾಪಿಸಿಕೊಂಡಿರುವ ದಿವ್ಯ ವಸ್ತುವಾದ ಪರಮಾತ್ಮನನ್ನು ಆಹ್ವಾನಿಸಿ ಕರೆಯುತ್ತೇನೆ ಎಂದರೆ ಎಲ್ಲಿಂದ ಬರಬೇಕು? ವಿಸರ್ಜಿಸಿ ಕಳಿಸುತ್ತೇನೆ ಎಂದರೆ ಒಂದು ಮುಳ್ಳನ್ನು ಚುಚ್ಚಲೂ ಜಾಗವಿಲ್ಲದಂತಿರುವ ಅಖಂಡ ವಸ್ತುವನ್ನು ಎಲ್ಲಿಗೆ ಕಳಿಸಬೇಕು? ಶಬ್ದ ಜಾಲವಾದ ಮಂತ್ರಗಳನ್ನು ಉಚ್ಛರಿಸುತ್ತ ಇಂಥ ಪೊಳ್ಳು ಜ್ಞಾನವನ್ನು ಪ್ರದರ್ಶಿಸುವ ಬದಲು ತನ್ನ ಕರಸ್ಥಲದಲ್ಲಿರುವ ಇಷ್ಟಲಿಂಗವನ್ನು ದೃಷ್ಟಿಸಿ ನೋಡಬೇಕು. ಆಗ ಮನಕ್ಕೆ ದೇವರ ದಿವ್ಯಾನುಭವ ಒದಗುವುದು, ಅಂಗಲಿಂಗ ಒಂದೆಂಬ ಅದ್ವೈತಾನುಭವ ಉಂಟಾಗುವುದು. ಆದ್ದರಿಂದಲೇ ಇಷ್ಟಲಿಂಗಪೂಜಕರಾದ ನಮ್ಮ ಶರಣರು ಆಹ್ವಾನಿಸುವ ಮತ್ತು ವಿಸರ್ಜಿಸುವ ಜಡಕ್ರಿಯೆಯನ್ನು ತೊರೆದು ತಮ್ಮ ತಮ್ಮ ಕರಸ್ಥಲದಲ್ಲಿಯೆ ಪರಮಪ್ರಭುವನ್ನು ಕಂಡರಾಗಿ ಅವರು ಸ್ವಯಲಿಂಗವಾದರು.

1201. ದೇವನ ಚಿನ್ನಾಟ

ತೋರುವನಯ್ಯಾ ಶಿವನು, ಅಡಗುವನಯ್ಯಾ ಶಿವನು
ಕಂಗಳ ಮುಂದೆ ಕಾಯಗೊಂಡು
ಮನದ ಮುಂದೆ ಕನಸಾಗಿ ಕಾಡುವನಯ್ಯಾ ಶಿವನು.
ಒಂದೆಡೆಯಲ್ಲಿದ್ದು ಹಲವೆಡೆಯಲ್ಲಿ ತೋರುವನು
ಹಲವೆಡೆಯಲ್ಲಿದ್ದು ಒಂದೇ ರೂಪಾಗಿದ್ದನು
ಕೂಡಲಸಂಗಮದೇವನು ಚಿನುಮಯನಾಗಿ
ಎನಗೆ ಅಸಾಧ್ಯವಾದನು.

ಬೆಕ್ಕಿಗೆ ಚಿನ್ನಾಟ ಇಲ್ಲಿಗೆ ಪ್ರಾಣಸಂಕಟ ಎಂಬಂತೆ ದೇವನು ಭಕ್ತನನ್ನು ಕಾಡಿಸುವನು. ಸಾಧಕನು ಹಂಬಲ ತುಂಬಿ ತಳಮಳಿಸುವಾಗ ಒಮ್ಮೆಲೇ ಶಿವನು ಕಾಣಿಸಿಕೊಳ್ಳುವನು. ಸಂಭ್ರಾಂತನಾದ ಸಾಧಕ ಇನ್ನೊಂದು ಸ್ವಲ್ಪ ಹೆಚ್ಚು ಹೊತ್ತು ಶಿವನ ದರ್ಶನ ಪಡೆಯಬೇಕು ಎಂದು ಹಂಬಲಿಸುವಾಗ ಈ ರೂಪವು ಕಣ್ಮರೆಯಾಗಿ ಸಾಧಕನಿಗೆ ನಿರಾಶೆಯುಂಟಾಗುವುದು. ಕಣ್ಣುಗಳ ಮುಂದೆ ಕಾಯಗೊಂಡು ಪ್ರತ್ಯಕ್ಷನಾಗುವನು; ಕನಸಿನಲ್ಲಿ ಕಾಣಿಸಿಕೊಂಡು ಕಾಡಿಸುವನು. ಇಲ್ಲಿ ನೋಡುವಾಗಲೇ ಅಲ್ಲಿ, ಅಲ್ಲಿ ನೋಡುವಾಗಲೇ ಇಲ್ಲಿ ಹೀಗೆ ಹಲವೆಡೆಯಲ್ಲಿ ತೋರುವನು. ಹಲವು ತಾಣಗಳಲ್ಲಿ ಕಾಣಿಸಿದರೂ ರೂಪ ಮಾತ್ರ ಒಂದೇ ಆಗಿರುವುದು. ಹೀಗೆ ಚಿನ್ಮಯ ಸ್ವರೂಪನಾದ ಕೂಡಲ ಸಂಗಮದೇವನು ನನ್ನ ಅನುಭವಕ್ಕೆ ಸಿಕ್ಕುತ್ತಲಿಲ್ಲ ಎಂದು ಸಾಧಕ ಜೀವಿ ಬಸವಣ್ಣನವರು ಅಲವತ್ತುಕೊಳ್ಳುತ್ತಾರೆ.

1202. ಯಾರನ್ನು ಜರಿಯುವುದು ?

ಘನಗಂಭೀರ ವಾರಿಧಿಯೊಳಗೆ ತೋರುವ ವೀಚಿಗಳು
ಆ ವಾರಿಧಿಯ ಬಿಟ್ಟು ತೋರಬಲ್ಲವೆ ?
ತೋರಿದಡೆ ಆ ವಾರಿಧಿ ತನ್ನ ತಾ ಜರಿದುಕೊಂಬುದೆ ?
ನಿಮ್ಮೊಳಡಗಿದ ಪ್ರಮಥರೆಲ್ಲರ
ಗುಣಾದಿಗಳೆಲ್ಲವನು ನಿಮ್ಮಡಿಗಳೆತ್ತಲುಂಟೆ
ಜಗದೊಳಗೆ ಕೂಡಿ ಪರಿಪೂರ್ಣನಾದ ಬಳಿಕ

ಇದಿರ ನೋಡಿ ಜರಿದು ನುಡಿವ ಠಾವಾವುದು ಹೇಳಯ್ಯಾ ?
ಲಿಂಗದೇವಯ್ಯಾ
ನಿಮ್ಮ ನೀವು ಪರಿಣಾಮಿಸಿಕೊಂಬುದಲ್ಲದೆ ಭಿನ್ನವ ಮಾಡಲುಂಟೆ ?

ವಿಸ್ತಾರವಾದ ಗಂಭೀರವಾದ ಸಮುದ್ರದ ಮೇಲೆ ತೆರೆಗಳು ಏಳುತ್ತಿರುತ್ತವೆ. ಅವು ಸಮುದ್ರವನ್ನು ಬಿಟ್ಟು ಇರುವುದಿಲ್ಲ. ಒಂಗು ವೇಳೆ ಸಮುದ್ರವನ್ನು ತೊರೆದು ಅಲೆಗಳು ಬಂದು ಮರಳಿನ ದಂಡೆಗೆ ಬಡಿದು, ಮರಳಿನಲ್ಲಿ ಅಡಗಿದರೆ ಅದರಿಂದ ಸಮುದ್ರಕ್ಕೆ ಕೊರತೆಯುಂಟಾಗುವುದೆ ? ಹಾಗೆ ಶರಣರುಗಳು ಲಿಂಗದೇವನೆಂಬ ಸಮುದ್ರದ ಅಲೆಗಳಿದ್ದಂತೆ. ಎಲ್ಲರೂ ಪರಿಪೂರ್ಣಾತ್ಮರೇನಲ್ಲ. ಎಲ್ಲರನ್ನೂ ಪರಿಪೂರ್ಣರನ್ನಾಗಿ ದೇವರೂ ಮಾಡಲಾರ. ಪರಮಾತ್ಮನು ಎಲ್ಲರಲ್ಲಿ ತುಂಬಿ ತುಳುಕುವಾಗ ಯಾರಲ್ಲಿ ತಪ್ಪು ಹುಡುಕಿ ಜರಿಯಲು ಸಾಧ್ಯ? ಲಿಂಗದೇವಾ, (ಅಂಥ ಕೊರತೆಯುಳ್ಳವರನ್ನು) ನೀನೇ ಸುಧಾರಿಸಿಕೊಂಡು ಇಂಬಿಟ್ಟುಕೊಳ್ಳಬೇಕು, ಕೊರತೆಯನ್ನು ಅರಸಲಾಗದು.

ಎಲ್ಲ ಶರಣರು, ಜಂಗಮರೂ ಒಂದೆ ಮಟ್ಟದವರಾಗಿರಲಿಲ್ಲ. ಅವರ ಲೋಪದೋಷಗಳನ್ನು ಹುಡುಕಿ ಜರಿದು ಪ್ರಯೋಜನವಿಲ್ಲ. ಅವರು ತ್ಯಾಗಿಗಳಾಗಿರುವುದೇ ಒಂದು ಕೊಡುಗೆ. ಹೀಗಾಗಿ ಗುರು ಬಸವಣ್ಣನವರು ಗುಣೈಕ ದೃಷ್ಟಿ ಹೊಂದಿ ಸದ್ಗುಣಗಳನ್ನೇ ಆಯ್ದು ಕೊಳ್ಳುತ್ತಾರೆ. ದೋಷಗಳನ್ನು ಕಡೆಗಣಿಸುತ್ತಾರೆ. ಎಲ್ಲ ಶರಣರನ್ನು ಪರಮಾತ್ಮನೆಂಬ ಸಮುದ್ರದ ಅಲೆಗಳು ಎನ್ನುತ್ತಾರೆ.

1203. ದಿವ್ಯಾನುಗ್ರಹದ ಅವತರಣ

ಅಯ್ಯಾ ಎನ್ನ ಹೃದಯದಲ್ಲಿ ವ್ಯಾಪ್ತವಾಗಿಹ ಪರಮ ಚಿದ್ಬೆಳಗ
ಹಸ್ತಮಸ್ತಕ ಸಂಯೋಗದಿಂದೊಡಗೂಡಿ
ಮಹಾಬೆಳಗ ಮಾಡಿದಿರಲ್ಲಾ !
ಅಯ್ಯಾ, ಎನ್ನ ಮಸ್ತಕದೊಳಗೊಂದುಗೂಡಿದ ಮಹಾಬೆಳಗ ತಂದು
ಭಾವದೊಳಗಿಂಬಿಟ್ಟಿರಲ್ಲಾ !
ಅಯ್ಯಾ, ಎನ್ನ ಭಾವದೊಳಗೆ ಕೂಡಿದ ಮಹಾಬೆಳಗ ತಂದು
ಮನಸಿನೊಳಗಿಂಬಿಟ್ಟಿರಲ್ಲಾ !
ಅಯ್ಯಾ, ಎನ್ನ ಮನಸಿನೊಳು ಕೂಡಿದ ಮಹಾಬೆಳಗ ತಂದು
ಕಂಗಳೊಳಗಿಂಬಿಟ್ಟಿರಲ್ಲಾ !
ಅಯ್ಯಾ, ಎನ್ನ ಕಂಗಳೊಳು ಕೂಡಿದ ಮಹಾಬೆಳಗ ತಂದು
ಕರಸ್ಥಲದೊಳಗಿಂಬಿಟ್ಟಿರಲ್ಲಾ !
ಅಯ್ಯಾ, ಎನ್ನ ಕರಸ್ಥಲದಲ್ಲಿ ಥಳಥಳಿಸಿ ಬೆಳಗಿ ಹೊಳೆಯುತ್ತಿಪ್ಪ
ಅಖಂಡ ತೇಜವನೆ ಇಷ್ಟಲಿಂಗವೆಂಬ ದೃಷ್ಟವ ತೋರಿ
ನಿಶ್ಚಯವ ಶ್ರೋತ್ರದಲ್ಲಿ ಸೃಜಿಸಿದಿರಲ್ಲಾ !
ಅಯ್ಯಾ, ಎನ್ನ ಶ್ರೋತ್ರದಲ್ಲಿ ಸೃಜಿಸಿದ ಸುಮಂತ್ರದೊಳಗೆ
ನೀವು ನಿಮ್ಮ ಮಹತ್ವವ ಹುದುಗಿದಿರಲ್ಲಾ !
ಅಯ್ಯಾ, ಎನ್ನ ಆರಾಧ್ಯ ಲಿಂಗದೇವ
ಎನ್ನೊಳಗೆ ನಿಮ್ಮಿರವ ಈ ಪರಿಯಲ್ಲಿ ಕಾಣಿಸುತ್ತಿರ್ದಿರಲ್ಲಾ !

ಇದು ಬಹಳ ಮಹತ್ವಪೂರ್ಣ ವಚನ. ಗುರು ಬಸವಣ್ಣನವರಿಗೆ ದಿವ್ಯಾನುಗ್ರಹ ಮತ್ತು ದಿವ್ಯಾನುಭವವಾದ ಪ್ರಸಂಗವನ್ನು ಚಿತ್ರಿಸುವುದಲ್ಲದೆ ಅವರಿಗೆ ಬೇರೆ ಯಾರೂ ವೈಯಕ್ತಿಕ ಗುರುವಿಲ್ಲ, ದೇವರೇ ಅವರನ್ನು ನೇರವಾಗಿ ಅನುಗ್ರಹಿಸಿದ್ದಾನೆ ಎಂಬುದನ್ನು ಪುಷ್ಟೀಕರಿಸುತ್ತದೆ. ಮೊದಲು ಬೆಳಗು ಮಸ್ತಕದ ಮೇಲೆ ಇಳಿಯುತ್ತದೆ. ನಂತರ ಭಾವ, ಮನಸ್ಸು, ಕಂಗಳಲ್ಲಿ ಇಳಿದು

ಕರಸ್ಥಲದ ಇಷ್ಟಲಿಂಗದಲ್ಲಿ ಅವತೀರ್ಣಗೊಳ್ಳುತ್ತದೆ. ನಂತರ ಮಂತ್ರದ ಉಪದೇಶವಾಗುತ್ತದೆ. ಇದನ್ನು ಹಂತಹಂತವಾಗಿ ವಿವರಿಸುತ್ತಾರೆ.

ಅಯ್ಯಾ, ಲಿಂಗದೇವಾ ಎನ್ನ ಹೃದಯಕಮಲದಲ್ಲಿ ವ್ಯಾಪಿಸಿರುವ ಚಿದ್ಬೆಳಗನ್ನು ನಿಮ್ಮ ಹಸ್ತವನ್ನು ಎನ್ನ ಮಸ್ತಕದ ಮೇಲಿರಿಸಿ ಮಹಾ ಬೆಳಗಾಗಿ ವಿಸ್ತರಿಸಿದಿರಿ. ಆ ಬೆಳಗು ನನ್ನ ನೆತ್ತಿಯಲ್ಲಿ ಅವತರಣಗೊಂಡು ನನ್ನ ಭಾವದಲ್ಲಿ ಅಡಕವಾಯಿತು. ಭಾವದಿಂದ ಮನಸ್ಸಿಗೆ ಇಳಿದು, ಕಣ್ಣುಗಳಲ್ಲಿ ಅಡಗಿದ ಮಹಾಬೆಳಗು ನನ್ನ ಕರಸ್ಥಲದಲ್ಲಿ ಇದ್ದ ಇಷ್ಟಲಿಂಗದಲ್ಲಿ ಅಡಕವಾಯಿತು. ಅದೇ ಸಮಯದಲ್ಲಿ ಕಿವಿಯಲ್ಲಿ ಮಂತ್ರವು ಮೊಳಗಿತು. ದೇವಾ, ನನ್ನೊಳಗೆ ನಿಮ್ಮ ಇರವ ಈ ರೀತಿಯಲ್ಲಿ ಕಾಣಿಸಿದಿರಿ.

ದೇವರು ನಿರಾಕಾರನು, ನಿರವಯನು ಅವನಿಗೆ ಮಾನವರ ಪಶುಪಕ್ಷಿಗಳ ಆಕಾರ ಕೊಡುವುದು ಬೇಡ, ಅವನೇ ಸೃಷ್ಟಿಸಿದ ಬ್ರಹ್ಮಾಂಡ ಗೋಲಾಕಾರವಾಗಿದೆ. ಆ ಆಕಾರದಲ್ಲೇ ಪರಮಾತ್ಮನನ್ನು ಸಾಕಾರಗೊಳಿಸಬೇಕು ಎಂದು ಗೋಲಾಕಾರ ಕಂತೆಯ ಕವಚವನ್ನು ದೇಹದಾಕಾರದಲ್ಲಿರುವ ಪಂಚಸೂತ್ರ ಲಿಂಗಕ್ಕೆ ಹೊದ್ದಿಸಿ ಇಷ್ಟಲಿಂಗವೆಂದು ಅದನ್ನು ಕರೆದು, ಸಿದ್ಧಪಡಿಸಿ ಇಟ್ಟುಕೊಂಡಿದ್ದರು. ದೇವನ ಆದೇಶದಂತೆ ಆ ಇಷ್ಟಲಿಂಗವನ್ನು ಅಂಗೈಯಲ್ಲಿ ಇಟ್ಟುಕೊಂಡು ದಿಟ್ಟಿಸುತ್ತ ಧ್ಯಾನಿಸುವಾಗ ಪರಮಾತ್ಮನ ಕಾರುಣ್ಯವು ಇಳಿದುಬಂದಿದೆ. ಹೀಗಾಗಿ ಲಿಂಗದೇವನೆ ಗುರು ಬಸವಣ್ಣನವರ ಜ್ಞಾನಗುರು ಮತ್ತು ದೀಕ್ಷಾಗುರುವು ಕೂಡ.

1204. ಜಂಗಮ ಮುಖದಿಂದ ಪ್ರಸಾದ

ಪವಿತ್ರ ಲಿಂಗಕ್ಕೆ ಅಪವಿತ್ರವ ಕೊಡಲೊಲ್ಲೆನೆಂಬುದೆನ್ನ ಭಾಷೆ
ಧರೆಯೊಳು ಬೆಳೆದ ನೆಲ್ಲು ಅಪವಿತ್ರವೆಂಬುದ ಬಲ್ಲೆನಾಗಿ ನಾನವನೊಲ್ಲೆ
ಪಾಟಿಗೆಟ್ಟ ಹೊಲದಲ್ಲಿ ಒಂದು
ಲಿಂಗಮೂರ್ತಿದೋರಿದಡೆ ಅದು ದಿವ್ಯಕ್ಷೇತ್ರವೆ ?
ಅಲ್ಲಿದ್ದವರೆಲ್ಲರೂ ಪವಿತ್ರಕಾಯರೆ ?
ಇದು ಕಾರಣ, ಅನಘ ಅನಾದಿ –
ಜಂಗಮಮುಖದಿಂದೊಗೆದುದು ಪ್ರಸಾದ
ಲಿಂಗದೇವಯ್ಯಾ, ನಿಮಗೆ ನೈವೇದ್ಯವೆನಗೆ ಪ್ರಸಾದ ತಪ್ಪದು
ನಿಮ್ಮವರು ಸವಿದ ಸವಿಯ ಕೈಯಾಂತು ಕೊಂಡುದ ನಾ ಬಲ್ಲೆನಾಗಿ.

ಪರಮಾತ್ಮನು ಪವಿತ್ರ ಚೈತನ್ಯ ; ಅಂತಹ ಪವಿತ್ರ ಚೈತನ್ಯ ನೆಲೆಸಿರುವ ದೇವಾಲಯ ಈ ದೇಹಾಲಯ. ಇದಕ್ಕೆ ಪದಾರ್ಥರೂಪದಲ್ಲಿ ಪವಿತ್ರವಾದುದನ್ನು ಕೊಡಬಾರದು ಎಂಬುದು ಗುರು ಬಸವಣ್ಣನವರ ಆದೇಶ ಮತ್ತು ಆಶಯ. ಭೂಮಿಯಲ್ಲಿ ಬೆಳೆದ ಅಕ್ಕಿ ಮುಂತಾದವು ಪದಾರ್ಥರೂಪದಲ್ಲಿರುತ್ತವೆ. ಅವನ್ನು ಇಷ್ಟಲಿಂಗಕ್ಕೆ ನೈವೇದ್ಯ ಮಾಡಬೇಕು. ಪದಾರ್ಥ+ಅರ್ಪಣೆ =ನೈವೇದ್ಯ. ನೈವೇದ್ಯ+ಅನುಗ್ರಹ= ಪ್ರಸಾದ. ಪಡಬಿದ್ದ ಒಂದು ಹೊಲದಲ್ಲಿ ಒಂದು ಲಿಂಗವು ಸಿಗುತ್ತದೆ ಎಂದುಕೊಳ್ಳುವಾ. ಆ ಸ್ಥಳವೇನೂ ದಿವ್ಯಕ್ಷೇತ್ರವಲ್ಲ. ಅಲ್ಲಿದ್ದವರೆಲ್ಲರೂ ಶರಣರಲ್ಲ ಜಂಗಮಲಿಂಗವಾದ ಇಷ್ಟಲಿಂಗದ ಮೂಲಕ ಬಂದುದು ಪ್ರಸಾದ. ಜ್ಞಾನಿಯಾದ ಜಂಗಮನ ಮೂಲಕ ಬಂದುದು ಪ್ರಸಾದ. ಜಂಗಮನ ಮೂಲಕ ಲಿಂಗದೇವನು ನೈವೇದ್ಯವನ್ನು ಸ್ವೀಕರಿಸುವನಾಗಿ ಭಕ್ತನಿಗೆ ಪ್ರಸಾದ ಲಭ್ಯವಾಗುತ್ತದೆ.

1205. ಪ್ರಸಾದವನ್ನು ತಿರಸ್ಕರಿಸಬಾರದು

ತಾ ಸವಿದಲ್ಲದೆ ಆ ಸವಿಯ ಲಿಂಗಕ್ಕರ್ಪಿಸಬಾರದು
ಅದೇನು ಕಾರಣವೆಂದಡೆ
ಆ ಲಿಂಗವು ಕಹಿ–ಸಿಹಿಯರಿಯದಾಗಿ !
ಇದು ಕಾರಣ.

ಕಹಿ ಎಂದು ಕಳೆದು, ಸಿಹಿ ಎಂದು ಕೊಂಡುದಾದಡೆ
ಕೊಂಡುದು ಕಿಲ್ಬಿಷ, ಲಿಂಗದೇವಾ

ಶರಣನು ಪ್ರಸಾದವನ್ನು ಸ್ವೀಕರಿಸುವಾಗ ಸಂತೋಷದಿಂದ ಸವಿಸವಿದು ಸ್ವೀಕರಿಸಬೇಕು. ಎಲ್ಲ ವಸ್ತುಗಳನ್ನು ಎಡೆ ಮಾಡಿದ ಮೇಲೆ ಲಿಂಗಕ್ಕೆ ನೈವೇದ್ಯ ಮಾಡಬೇಕು. ನಂತರ ಪ್ರಸಾದದ ರುಚಿಯನ್ನು ಸವಿದು ಆ ಸವಿಯನ್ನು ಮನದ ಮಹಾಲಿಂಗಕ್ಕೆ ಸಮರ್ಪಿಸಬೇಕು. ನೈವೇದ್ಯ ಆದ ಬಳಿಕ ಯಾವುದಾದರೂ ಕಹಿ ಎನಿಸಿದರೆ ಉದಾಹರಣೆಗೆ ಕಹಿ ಸೌತೆಕಾಯಿ, ಕಹಿ ಹೀರೆಕಾಯಿ ಅವನ್ನು ಬೀಸಾಡದೆ ತಿನ್ನಬೇಕು. ಸಿಹಿಯನ್ನು ಮಾತ್ರ ತಿಂದು ಕಹಿಯನ್ನು ಬೀಸಾಡಿದರೆ ಪ್ರಸಾದದ ದೋಷ ಪ್ರಾಪ್ತವಾಗುವುದು.

1206. ಪ್ರಸಾದ ಜೀವಿಯಾಗಬೇಕು

ಗಿರಿಯ ಶಿಖರದ ಮೇಲೆ ಕುಳಿತುಕೊಂಡು, ಜೆಡೆಯನೇರಿಸಿಕೊಂಡು
ಹುತ್ತೇರಿ ಹಾವು ಸುತ್ತಿರ್ದಡೇನಯ್ಯಾ ?
ಕೃತಯುಗ ತ್ರೇತಾಯುಗ ದ್ವಾಪರ ಕಲಿಯುಗದೊಡನೊಡನೆ
ಸವೆಯ ಪಾಷಾಣ !
ನಮ್ಮ ಲಿಂಗದೇವನ ಶರಣರ ಪ್ರಸಾದ ಜೀವಿಗಳಲ್ಲದವರು
ಏಸು ಕಾಲವಿರ್ದಡೇನು ಅದರಂತೆ ಕಾಣಿರಣ್ಣಾ.

ಜನರ ಸಹವಾಸವೇ ಬೇಡ ಎಂದು ಕೆಲವರು ಬೆಟ್ಟಗಳ ಶಿಖರಗಳನ್ನು ಏರುವರು. ಜಡೆ ಬೆಳೆಯುವುದು, ಅವರ ಮೇಲೆ ಹುತ್ತ ಕಟ್ಟುವುದು. ಹುತ್ತದಲ್ಲಿ ಹಾವುಗಳು ನೆಲೆಸುವವು. ಅವರ ಜೀವನ ಕಲ್ಲಿನಂತೆ ಜಡ. ಕೃತಯುಗ, ತ್ರೇತಾಯುಗ, ದ್ವಾಪರ, ಕಲಿಯುಗ ಬಂದರೂ ಆ ಕಲ್ಲು ಸವೆಯದು, ಅಲ್ಲಾಡದು. ನಮ್ಮ ಶರಣರ ಪರಿ ಹಾಗಲ್ಲ. ಅವರು ಸಮಾಜದ ಮಧ್ಯೆ ಇರುವರು. ದಿನ ನಿತ್ಯ ಲಿಂಗಜಂಗಮದ ಪ್ರಸಾದ ಸ್ವೀಕರಿಸುವರು ಮತ್ತು ತಾವು ಪುನಃ ಜ್ಞಾನಪ್ರಸಾದವನ್ನು ಜಗತ್ತಿಗೆ ನೀಡುವರು. ಈ ರೀತಿ ಬಾಳದವರು ಕಲ್ಲಿನಂತೆ ಜಡ ದೇಹಿಗಳು.

1207. ಲಿಂಗಕ್ಕರ್ಪಿಸಿ ಶುದ್ಧೀಕರಿಸುವುದು.

ಮರಗಿಡ ಬಳ್ಳಿ ಧಾನ್ಯಂಗಳ ಬೆಳಸೆಲ್ಲವ ತರಿತರಿದು
ಪ್ರಾಣವ ಕೊಂಡುಂಡು, ಶರೀರವ ಹೊರೆವ ದೋಷಕ್ಕೆ
ಇನ್ನಾವುದು ವಿಧಿಯಯ್ಯಾ ?
ಒಂದಿಂದ್ರಿಯ ಮೊದಲಾಗಿ ಐದಿಂದ್ರಿಯ ಕಡೆಯಾದ
ಜೀವಜಾಲದಲ್ಲಿದೆ ಚರಾಚರವೆಲ್ಲ
ಅದು ಕಾರಣ,
ಲಿಂಗದೇವನ ಶರಣರು ಲಿಂಗಕ್ಕರ್ಪಿಸಿ, ಪ್ರಸಾದವ ಕೊಂಡು
ನಿರ್ದೋಷಿಗಳಾಗಿ ಬದುಕಿದರು.

ಮರಗಿಡ ಬಳ್ಳಿಧಾನ್ಯಂಗಳು ಕೊಡುವ ಬೆಳಸೆಲ್ಲವನ್ನು ಮನುಷ್ಯ ತರಿತರಿದು ಅವುಗಳ ಪ್ರಾಣವನ್ನು ಕೊಂಡು ತಾನು ಉಂಡು ತನ್ನ ಶರೀರವನ್ನು ಹೊರೆಯುವನು. ಮನುಷ್ಯನಿಗೆ ಬೇರೆ ದಾರಿಯೇ ಇಲ್ಲ. ಇಡೀ ಜಗತ್ತೆಲ್ಲವೂ ಒಂದು ಇಂದ್ರಿಯ(ಅಮೀಬಾ) ಮೊದಲಾಗಿ ಐದು ಇಂದ್ರಿಯ ಹೊಂದಿ ಇದೆ. ಎಲ್ಲವೂ ಜೀವಮಯವೆ ! ಆದರೆ ಮನುಷ್ಯ ಬದುಕಲೇ ಬೇಕಷ್ಟೆ. ಅದಕ್ಕಾಗಿ ತಾವು ಉಣ್ಣುವ ಪದಾರ್ಥವನ್ನು ಲಿಂಗಕ್ಕೆ ಅರ್ಪಿತವ ಮಾಡಿ ಅದನ್ನು ಪ್ರಸಾದವನ್ನಾಗಿ ಮಾಡಿಕೊಂಡು ಉಂಡು ನಿರ್ದೋಷಿಗಳಾಗಿ ಬದುಕಬೇಕು.

Plants have life. ಸಸ್ಯಗಳಲ್ಲೂ ಪ್ರಾಣವಿದೆ ಎಂಬುದನ್ನು ಜೈನ ಶಾಸ್ತ್ರಗಳಂತೆ ವಚನಕಾರರೂ ಪ್ರತಿಪಾದಿಸಿದ್ದಾರೆ. ಪ್ರಾಣಿಗಳಲ್ಲಿ ಐದೂ ಇಂದ್ರಿಯಗಳು ಇರುವುದಲ್ಲದೆ ಜೀವ (Soul) ಮತ್ತು ಪ್ರಜ್ಞೆ (consciousness) ಇರುವುದರಿಂದಲೂ, ಅಲ್ಲಿ ನೋವು–ನಲಿವು,

ಸುಖ-ದುಃಖ ಇರುವುದರಿಂದಲೂ ಪ್ರಾಣಿಗಳನ್ನು ಹಿಂಸಿಸಬಾರದು, ಕೊಲ್ಲಬಾರದು ಎಂದು ಹೇಳಲಾಗುತ್ತದೆ.

1208. ಪ್ರಸಾದ ಯಾವುದು ?

ಲಿಂಗಕ್ಕೆ ಕೊಟ್ಟು ಕೊಂಡದೆ ಪ್ರಸಾದಿ.
ಜಂಗಮವಾರೋಗಣೆಯ ಮಾಡಿ ಮಿಕ್ಕುದು ಪ್ರಸಾದ
ಇದೇ ಪ್ರಸಾದದಾದಿ ಕಂಡಯ್ಯಾ
ಮುನ್ನಾದಿಯ ಪ್ರಸಾದವ ಭೇದಿಸಬಲ್ಲಡೆ ಇದೆ ಕಂಡಯ್ಯಾ
ಲಿಂಗಕ್ಕೆ ಕೊಡದೆ ಜಂಗಮಕ್ಕೆ ನೀಡದೆ ಕೊಂಡಡೆ
ಹುಳುಗೊಂಡದಲ್ಲಿಕ್ಕುವ, ನಮ್ಮ ಲಿಂಗದೇವ.

ದಿನ ನಿತ್ಯ ಸುಪ್ರಭಾತದಲ್ಲಿ ಇಷ್ಟಲಿಂಗಾರ್ಚನೆ ಮಾಡಿ, ಕಲ್ಲುಸಕ್ಕರೆ, ದ್ರಾಕ್ಷಿ ಮುಂತಾದ ವಸ್ತುವನ್ನು ಅದಕ್ಕೆ ಎಡೆ ಮಾಡಿ, ಪೂಜಾ ನಂತರ ಮೂರು ಬಾರಿ ನೀರನ್ನು ಎರೆದು ಈ ಕರುಣೋದಕವನ್ನು ಮತ್ತು ನೈವೇದ್ಯ ಮಾಡಿದ ಪ್ರಸಾದವನ್ನು ಸ್ವೀಕರಿಸಬೇಕು ಇದು ಲಿಂಗಪ್ರಸಾದ. ತಾವು ಉಣ್ಣುವುದಕ್ಕೆ ಮೊದಲೇ ಜಂಗಮರಿಗೆ (ತ್ಯಾಗಿಗಳು, ಯೋಗಿಗಳು, ಧರ್ಮಪ್ರಸಾರಕರು, ಸಮಾಜ ಸೇವಕರು, ಶರಣರು) ಉಣ್ಣಿಸಿ ನಂತರ ತಾನು ಉಣ್ಣುವುದು ಜಂಗಮ ಪ್ರಸಾದ. ಆದಿ ಶರಣರ ಕಾಲದಲ್ಲಿ ಬಹು ಬಗೆಯ ಧರ್ಮಪ್ರಸಾರಕರು, ಗಣಾಚಾರಿಗಳು ಇದ್ದರು. ಕಲ್ಯಾಣವನ್ನು ಸಂದರ್ಶಿಸುತ್ತಿದ್ದ ಅತಿಥಿಗಳೂ ಸಹ ಜಂಗಮರೆ ಅಂಥ ಆಗಂತುಕರನ್ನು ಕರೆತಂದು ಉಣ್ಣಿಸುತ್ತಿದ್ದರು. ಹೀಗಾಗಿ ಭಕ್ತರ ಮನೆಗಳೆಲ್ಲ ದಾಸೋಹಮಠಗಳಾಗಿದ್ದವು ಎಂದು ಬಣ್ಣಿಸಲಾಗುವುದು.

ಕೋರಾನ್ನ ಭಿಕ್ಷೆ, ಕಂಥೆಯ ಭಿಕ್ಷೆ ಇತ್ತೀಚಿನವರೆಗೂ, ಈಗಲೂ ಗ್ರಾಮಾಂತರ ಪ್ರದೇಶಗಳಲ್ಲಿ ಈ ಭಿಕ್ಷೆಗಳುಂಟು. ಕೋರಾನ್ನ ಭಿಕ್ಷೆ ಎಂದರೆ ಧಾನ್ಯ, ಹಿಟ್ಟು ಮುಂತಾದುವನ್ನು ನೀಡುವುದು. ಕಂಥೆಯ ಭಿಕ್ಷೆ ಎಂದರೆ ಸಿದ್ಧಪಡಿಸಿದ ಅಡಿಗೆಯನ್ನು ನೀಡುವುದು. ಈ ಆಚರಣೆಯ ಹಿಂದೆ ಬಹಳ ಅರ್ಥವಿದೆ. ಆದರೆ ದುರ್ದೈವವೆಂದರೆ ಅವು ಅಸ್ಥಿಪಂಜರದಂತೆ ಈಗ ಉಳಿದಿವೆ. ಧರ್ಮಪ್ರಚಾರ ಮಾಡಬೇಕಾದ ಜಂಗಮರು ಅದನ್ನು ಮಾಡದೆ (ಅವರಾದರೂ ಏನು ಮಾಡಬೇಕು ಅವರಿಗೆ ತರಬೇತಿ ನೀಡಲಾಗುತ್ತಿಲ್ಲ. ಕೇವಲ ಹಿಟ್ಟು ಬೇಡಿಕೊಂಡು ಬಡತನದಲ್ಲಿ ಬಳಲುತ್ತಿದ್ದಾರೆ. ಕಂಥೆಯ ಭಿಕ್ಷೆದಿಂದ ಹಿಂದೆ ಹಲವಾರು ಮಠಗಳು ಬಡಮಕ್ಕಳಿಗೆ ವಿದ್ಯೆಯನ್ನು, ದಾರಿ ಹೋಕರಿಗೆ ಪ್ರಸಾದವನ್ನು ನೀಡಿವೆ.

ಈಗ ಜೀವನ ನಗರೀಕರಣ ಹೊಂದಿದೆ. ಆದ್ದರಿಂದ ಜನರು ತಮ್ಮ ಆದಾಯದ ಒಂದು ಪಾಲನ್ನು ಧರ್ಮಕ್ಕಾಗಿ ಸಮಾಜ ಸೇವೆಗಾಗಿ ಎತ್ತಿಟ್ಟು ಬಿಡಬೇಕು. ಖಾಸಗಿಯಾಗಿ ಜಂಗಮರಿಗೆ ನೀಡಲು ಸಾಧ್ಯವಾಗದು.

ಒಕ್ಕ ಪ್ರಸಾದ, ಮಿಕ್ಕ ಪ್ರಸಾದ

ಗುರು-ಜಂಗಮರಿಗೆ ಮೊದಲು ನೀಡಿ ನಂತರ ಉಣ್ಣುವುದು ಒಕ್ಕಪ್ರಸಾದ. ಯಾರಲ್ಲಿ ಅನನ್ಯವಾದ ಭಕ್ತಿ-ಶ್ರದ್ಧೆ ಇದೆಯೋ ಅವರು ಉಣ್ಣುವಾಗ ಅವರಿಂದ ಪ್ರಸಾದವನ್ನು ಪಡೆಯುವುದು ಒಕ್ಕಪ್ರಸಾದ. ಗುರು-ಜಂಗಮರು ಉಂಡು ಹೆಚ್ಚಾಗಿ ಉಳಿದರೆ ಅದು ಮಿಕ್ಕ ಪ್ರಸಾದ. (ಕೆಲವರು ಬೇಕೆಂತಲೇ ತಟ್ಟೆಯಲ್ಲಿ ಜಾಸ್ತಿ ನೀಡಿ ಉಳಿಸಿಕೊಂಡು, ನಂತರ ಸ್ವೀಕರಿಸುವರು.)

ಇಷ್ಟಲಿಂಗಕ್ಕೆ ಕೊಡದೆ, ಜಂಗಮಕ್ಕೆ ನೀಡದೆ ಒಬ್ಬ ವ್ಯಕ್ತಿ ಬದುಕಿದರೆ ಅಂಥವನಿಗೆ ಲಿಂಗದೇವನಿಂದ ಘೋರಶಿಕ್ಷೆ ಕಾದಿರುವುದಾಗಿ ಗುರು ಬಸವಣ್ಣನವರು ಹೇಳುತ್ತಾರೆ.



ಶರಣ. ಕೃಷ್ಣಪ್ಪ ಅವರಿಗೆ ಸತ್ಕಾರ



ಶರಣೆ. ಡಾ॥ ವಿಜಯಲಕ್ಷ್ಮಿ ಬಾಳೇಕುಂದ್ರಿ ಅವರಿಗೆ ಸತ್ಕಾರ



ಶರಣ. ಹೆಚ್. ಎಸ್. ಚನ್ನಬಸವಣ್ಣನವರಿಗೆ ಸತ್ಕಾರ



ಬಸವ ಜಯಂತಿ– ಡಾ|| ಬಸವರಾಜ ಹೂಗಾರರಿಗೆ ಸತ್ಕಾರ



ಬೆಳಗಾವಿಯಲ್ಲಿ ರಾ. ಬ. ದಳದಿಂದ ಬಿನ್ನವತ್ತಳೆ ಸಮರ್ಪಣೆ



ಬೆಳಗಾವಿಯಲ್ಲಿ ದಿ. 30-05-2013,
ಪೂಜ್ಯ ಮಾತಾಜಿಯವರ ಭವ್ಯ ಮೆರವಣಿಗೆ

Registerd NO/KA/BGW/50/2012-2014, RNI 19980/70, POSTED AT MBC BANGALORE GPO ON 3rd,10th,20th, OF EVERY MONTH. LICENCED TO POST WITHOUT PRE PAYMENT WPP-17, PAGES 32+4+4 (COVER PAGES)